of the Secretary will be open to receive notice of candidature up to 3 P.M. on Wednesday, the 21st March 1956 and that the election, if necessary, will take place on Friday, the 23rd March 1956, in the Assistant Secretary's room between the hours of 3 P.M. and 5 P.M. The election will be conducted as laid down in rule 175 of the Rules of Procedure and Conduct of Business in the Mysore Legislative Assembly in accordance with the principle of proportional representation by means of the single transferable vote.

Public Health Board.

Motion for election of two Members.

Sri T. CHANNIAH (Minister for Public Health and Local Self-Government).—Sir, I beg to move :

> "That this Assembly do proceed to the election of two members to the Public Health Board in accordance with sub-section 1 (*d*) of Section 4 of the Mysore Public Health Act, 1944."

Mr. SPEAKER.—The question is :

> "That this Assembly do proceed to the election of two members to the Public Health Board in accordance with sub-section 1 (*d*) of Section 4 of the Mysore Public Health Act, 1944."

The motion was adopted.

Mr. SPEAKER.—The Chair desires to inform the House that for the purpose of election of two members to the Public Health Board the office of the Secretary will be open to receive notice of candidature up to 3 P.M. on 22nd March 1956 and that the election, if necessary, will take place on Saturday, the 24th March 1956, in the Assistant Secretary's room between the hours of 9 A.M. and 11 A.M. The election will be conducted according to the majority system of vote.

Board of Industries.

Motion for Election of a Member

Sri T. CHANNIAH (Minister for Public Health and Local Self-Government).—Sir, I beg to move :

> "That this Assembly do proceed to the election of one member to the Board of Industries in accordance with Section 4 of the Mysore Aid to Industries Act, 1951 in the manner set out in rule 11 of the Mysore State Aid to Industries Rules, 1951."

Mr. SPEAKER.—The question is :

> "That this Assembly do proceed to the election of one member to the Board of Industries in accordance with Section 4 of the Mysore Aid to Industries Act, 1951 in the manner set out in rule 11 of the Mysore State Aid to Industries Rules 1951."

The motion was adopted.

Mr. SPEAKER.—The Chair desires to inform the House that for the purpose of election of one member the Board of Industries, the office of the Secretary will be open to receive notice of candidature up to 3 P.M. on 23rd March 1956 and that the election, if necessary, will take place on Sunday, the 25th March 1956, in the Assistant Secretary's room between the hours 3 P.M. and 5 P.M. The election will be conducted as laid down in rule 11 of the Mysore State Aid to Industries Rules, 1951, in accordance with the principle of proportional representation by means of the single transferable vote.

BUDGET FOR 1956-57—DEMANDS FOR GRANTS.

Mr. SPEAKER.—Next item of business is Demands. There are four Demands, *viz.*, Nos. 6, 16, 39 and 43. As Sri H. Siddaveerappa, the Home Minister, is unable to participate in the discussion on all these Demands, he desires that Demand No. 16 be taken

(MR. SPEAKER.)

up first ; Sri H. M. Channabasappa will reply to the debate on the other three Demands.

Regarding time-limit, I feel that $1\frac{1}{2}$ hours may be allotted for Demand No. 16 and the rest of the time may be divided between the other three Demands.

MEMBERS.—Yes.

DEMAND No. 16—POLICE.

29. POLICE.

Mr. SPEAKER.—Motion moved :

"That a sum not exceeding Rs. 1,27,17,860 be granted to the Government to defray the charges which will come in course of payment during the year ending 31st day of March 1957, in respect of 'Police'."

* ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ವರ್ಷೇ ವರ್ಷೇ ಈ ಕತ್ತರಿ ನಿರ್ಣಯಗಳನ್ನು ಮಂಡಿಸತಕ್ಕ ಕಾಲದಲ್ಲಿ ನಾವು ಪೋಲೀಸ್ ಬಾಬಿನ ಖರ್ಚು ಕಡಮೆ ಮಾಡಬೇಕು, ಬರಬರುತ್ತಾ ಬಹಳ ಹೆಚ್ಚಾಗಿದೆ ಎಂದು ಹೇಳುತ್ತಿದ್ದೇವೆ. ಈಗ ನಾಲ್ಕು ವರ್ಷಗಳಿಂದಲೂ ಇದನ್ನು ಹೇಳುತ್ತಿದ್ದೇವೆ. ಸರ್ಕಾರದವರೂ ಸಹ ಒಂದೇ ರೀತಿಯಾದ ಜವಾಬನ್ನು ಕೊಡುತ್ತಿದ್ದಾರೆ. ಆ ಇಲಾಖೆಯನ್ನು ಮಾರ್ಪಾಡು ಮಾಡುವುದರ ಮೂಲಕ ಖರ್ಚನ್ನು ಕಡಮೆ ಮಾಡುವುದಾಗಲಿ ಅಥವಾ ಇಲಾಖೆ ಮಾರ್ಪಾಟನ್ನಾಗಲಿ ಏನೂ ಮಾಡಿಲ್ಲ. ಹೆಚ್ಚಾಗಿ ನಾವು ಇದನ್ನು ಹೇಳುತ್ತಿದ್ದರೆ ಜವಾಬು ಹೇಳುವಾಗ ಹೇಳಿದ್ದೇ ಹೇಳುತ್ತಿದ್ದಾರೆಂದು ಆಕ್ಷೇಪಣೆ ಮಾಡತಕ್ಕದ್ದೂ ಇದೆ. ಸರ್ಕಾರದವರು ಅನೇಕಸಾರಿ ಹೀಗೆಯೇ ಹೇಳಿದ್ದಾರೆ.

ಈಗ ಒಂದು ವಿಷಯ ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. 1946-47ರಲ್ಲಿ ಈ ಪೋಲೀಸ್ ಇಲಾಖೆಗೆ 29 ಲಕ್ಷ ರೂಪಾಯಿಗಳ ಖರ್ಚು ಮಾತ್ರ ಇತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರ ವಹಿಸಿಕೊಂಡ ವರ್ಷ 1950-51ರ ಲೆಕ್ಕ ತೆಗೆದುಕೊಂಡರೆ ಆ ವರ್ಷದಲ್ಲಿ ಪೋಲೀಸು ಇಲಾಖೆಗೆ 88 ಲಕ್ಷ ರೂಪಾಯಿ ಖರ್ಚಾಯಿತು. ಈ ದಿವಸ 1956-57ರ ಬಜೆಟ್ ಆಗಿರುವುದು ಒಂದು ಕೋಟಿ 27 ಲಕ್ಷ ರೂಪಾಯಿಗಳಿಗೆ. 1946-47ರಲ್ಲಿ 29 ಲಕ್ಷ ರೂಪಾಯಿಗಳ ಖರ್ಚಿತ್ತು. ಮೈಸೂರು ಸರ್ಕಾರದಲ್ಲಿ ಪೋಲೀಸು ಇಲಾಖೆಗೆ ಹತ್ತು ವರ್ಷಗಳು ಕಳೆದಮೇಲೆ ಅಂದಾಜಾಗಿರುವುದೆಷ್ಟು ಎಂದರೆ ಅಗ್ಗಿಂತ ಸುಮಾರು ಒಂದು ಕೋಟಿ ಹೆಚ್ಚು. ಬೇಕಾದಷ್ಟು ಕಾರಣ ಇದಕ್ಕೆ ಹೇಳಬಹುದು. ಸರ್ಕಾರದವರೇ ಸೂಚಿಸಿದ್ದಾರೆ, ಹೋದ ವರ್ಷ ಹೇಳಿದ್ದಾರೆ; ಜ್ಞಾಪಕವಿದೆ. ಆದರೆ ನಮಗೇನಾದರೂ ಇಷ್ಟು ಖರ್ಚು ಮಾಡುವುದಕ್ಕೆ ಶಕ್ತಿಯಿದೆಯೆ ಅಥವಾ ಅಗತ್ಯವಿದೆಯೆ ಎಂದು ನಾನು ಕೇಳುವುದು. ಯಾವಾಗ ನಮ್ಮ ಮುಂದೆ ಬಜೆಟ್ ಅಂದಾಜಿಟ್ಟರೋ ಆಗ ಅಗತ್ಯವಿದೆಯೆಂದೇ ಭಾವಿಸಬೇಕು. ಆದರೆ ಇದರಲ್ಲಿ ಉಳಿತಾಯ ಮಾಡುವುದಕ್ಕೆ ಅವಕಾಶವಿದೆಯೆಂದು ನಾವು ಹೇಳಬೇಕಾಗಿದೆ. ಯಾವ ರೀತಿ ಉಳಿತಾಯ ಮಾಡುವುದಕ್ಕೆ ಅವಕಾಶ ಇದೆ ಎಂದು ಕೇಳಿದರೆ : ಈಗ ಆ ಇಲಾಖೆಯಲ್ಲೇನಾಗಿದೆಯೆಂದರೆ, ಪೋಲೀಸು ಕಾನ್ಸ್ಟೇಬಲ್ಲುಗಳ ಸಂಖ್ಯೆ ಸುಮಾರು 10 ಸಾವಿರವಿದೆ, ಅಧಿಕಾರಿಗಳು ಸುಮಾರು 2,212 ಜನರಿದ್ದಾರೆಂದು ಕಾಣುತ್ತದೆ. ಮಾನ್ಯ ಗೃಹ ಸಚಿವರು ನಮಗೆಲ್ಲಾ ಈ ಅಂಕಿ ಅಂಶಗಳ ವಿಚಾರವಾಗಿ ಒಂದು ಪುಸ್ತಕವನ್ನು ಹಂಚಿದ್ದಾರೆ. ಅದು ಬಹಳ ಉಪಯುಕ್ತವಾಗಿದೆ. ಅದರ ಪ್ರಕಾರ ಮೈಸೂರು ಸಂಸ್ಥಾನದ 1,132 ಪ್ರಜೆಗಳಿಗೆ ಒಬ್ಬ ಪೋಲೀಸು ಅಧಿಕಾರಿಯಿದ್ದಾರೆಂದೂ ಮತ್ತು ಸಂಸ್ಥಾನದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಪೋಲೀಸು ಇಲಾಖೆ ವಿಚಾರದಲ್ಲಿ ರೂ. 1-3-0 ಖರ್ಚಾಗುತ್ತಿದೆಯೆಂದೂ ಗೊತ್ತಾಗುತ್ತದೆ. ಇತರ ಸಂಸ್ಥಾನಗಳಿಗಿಂತ ಇದು ಹೆಚ್ಚಾಗಿರಲಾರದು, ಕಡಮೆ ಇರಬಹುದು. ನಮ್ಮ ಸಂಸ್ಥಾನದಲ್ಲಿ ನಾವು ಪೋಲೀಸು ಇಲಾಖೆಗೆ ಖರ್ಚು ಮಾಡುವುದು ಇತರ ಸಂಸ್ಥಾನಗಳಿಗಿಂತ ಬಹಳ ಕಡಮೆಯೆಂದು ಅನೇಕಸಾರಿ ಹೇಳಿದ್ದಾರೆ, ನಿಜ. ಏತರಿಂದ ಕಡಮೆಯಾಗಿದೆಯೆಂಬುದನ್ನು ನೋಡಬೇಕು. ನಮ್ಮಲ್ಲಿ ಕಾನ್ಸ್ಟೇಬಲ್‌ಗೆ 22 ರೂಪಾಯಿಗಳ ಸಂಬಳವಿದ್ದರೆ ಬೊಂಬಾಯಿನಲ್ಲಿ 40 ರೂಪಾಯಿಗಳಿವೆ ; ನಮ್ಮಲ್ಲಿ ಇನ್ಸ್‌ಪೆಕ್ಟರಿಗೆ 150 ರೂಪಾಯಿಗಳಿಂದ 200ರೂಪಾಯಿಗಳವರೆಗಿದೆ, ಬೊಂಬಾಯಿನಲ್ಲಿ ಬಹಳ ಹೆಚ್ಚಾಗಿದೆ. ನಮ್ಮಲ್ಲಿ ಮೇಲಿರುವ ಅಧಿಕಾರಿಗಳಿಗೆ ಹೆಚ್ಚು ಹೆಚ್ಚಾದ ಸಂಬಳವಿದೆ. ಐ. ಜಿ. ಪಿ.ಗೆ 1,600 ರೂಪಾಯಿಗಳಿರಬಹುದು, ಇತರ ಪ್ರಾಂತಗಳಲ್ಲಿ 3,000 ರೂಪಾಯಿಗಳವರೆಗಿದೆ. ಆದ್ದರಿಂದ ಇತರ ಪ್ರಾಂತಗಳಲ್ಲಿ ಸಂಬಳ ಬಹಳ ಹೆಚ್ಚಿನ ದರದಲ್ಲಿ ಕೊಡುವುದರಿಂದ ನಮ್ಮ ಖರ್ಚು ಬಹಳ ಕಡಮೆಯೆಂದು ಹೇಳಿಕೆ ಕೊಡುವುದು ಸರಿಹೋಗುತ್ತದೆಯೆ ? ನಮ್ಮಲ್ಲಿ ನೌಕರಮಾನೇರುಗಳಿಗೆ ಇತರ ಎಲ್ಲಾ ಪ್ರಾಂತಗಳಿಗಿಂತ ಬಹಳ ಕಡಮೆ ದರದಲ್ಲಿ ಸಂಬಳಕೊಟ್ಟು, ಖರ್ಚು ಬಹಳ ಕಡಮೆಯೆಂದು ಹೇಳುವುದು ಅಷ್ಟು ಸಾಧುವಲ್ಲ ಮತ್ತು ಇಲ್ಲಿನ ನಿಜವಾದ ಪರಿಸ್ಥಿತಿಗೆ ಈಗ ಕೊಡುವುದು ಸಾಲದು ಎಂಬುದು ನನ್ನ ಭಾವನೆ.

ಎರಡನೆಯದು ನಮ್ಮ ಪೋಲೀಸು ಇಲಾಖೆಯಲ್ಲಿ ಕಾರ್ಯಕಲಾಪ ನಿರ್ವಹಿಸುವುದಕ್ಕೆ ಒಂದು ಶಾಸನವಿದೆ. ಬಹುಶಃ ಅದು 1905 ಅಥವಾ 1902ನೆಯ ಇಸವಿಯಲ್ಲಿ ಜಾರಿಗೆ ಬಂದಿರಬಹುದು. ಆ ಶಾಸನದ ರೀತಿಯಲ್ಲಿ ಕಾರ್ಯ ಕಲಾಪ ನಡೆಯುತ್ತಿದೆ. ಆಗಿನ ಸನ್ನಿವೇಶವೇನೆಂದು ನೋಡಿದರೆ ಆಗ ಬ್ರಿಟಿಷರ ಆಳ್ವಿಕೆಯಿತ್ತು. ಆಗ ಪೋಲೀಸ್ ಎಂದರೆ ಒಂದು ತರಹ ಭಯಪಡಿಸುವ ರೀತಿಯಲ್ಲಿತ್ತು. ಈಗ ಪೋಲೀಸ್ ಎಂದರೆ ಸಾರ್ವಜನಿಕರ ಮಿತ್ರ ಎಂಬ ಭಾವನೆಯನ್ನಿಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ಆ ಭಾವನೆಗನುಗುಣವಾಗಿ ಆ ಶಾಸನವಿದೆಯೆಂದು ವಿಮರ್ಶೆಮಾಡಿ ಅದನ್ನು ಸರಿಯಾಗಿ ಬದಲಾಯಿಸಬೇಕಾದದ್ದು ಮೊದಲನೆಯ ಕೆಲಸ. ಎರಡನೆಯದು ಆ ಶಾಸನದ ಪ್ರಕಾರ ಎ. ಎಸ್ ಪಿ. ಮತ್ತು ಡಿ. ಐ. ಜಿ.ಗಳಿಗೆ ಶಾಸನ ದತ್ತವಾದ ಅಧಿಕಾರವಿಲ್ಲ. ಈಗ ಅವರು ಚಲಾವಣೆ ಮಾಡುವ ಅಧಿಕಾರವಾದರೂ ಡೆಲಿಗೇಟೆಡ್ ಪವರ್ಸ್. ಅವರ ಮೇಲ್ಪಟ್ಟ ಅಧಿಕಾರಿಗಳಿಗೆ ಯಾವ ವಿಧವಾಗಿ ಅಧಿಕಾರಕೊಡುವುದಕ್ಕೆ ಅವಕಾಶವಿದೆಯೋ ಅಂಥ ಅಧಿಕಾರವನ್ನು ಅವರು ವಹಿಸಿದರೆ ಆ ರೀತಿ ದತ್ತವಾದ ಅಧಿಕಾರವನ್ನು ಚಲಾಯಿಸುವ ಹಕ್ಕು

ಎ. ಎಸ್. ಪಿ. ಮತ್ತು ಡಿ. ಐ. ಜಿ. ಗಳಿಗಿದೆ. ಇದನ್ನು ನಾಲ್ಕು ವರ್ಷಗಳಿಂದ ನಾನು ಹೇಳುತ್ತಿದ್ದೇನೆ. ಅವರಿಗೆ ಶಾಸನ ದತ್ತವಾದ ಅಧಿಕಾರವಿಲ್ಲ. ಒಂದುವೇಳೆ ಹಾಗೆ ಅವನ್ನು ಇಟ್ಟುಕೊಳ್ಳಬೇಕಾದ ಒಂದು ಆವಶ್ಯಕತೆ ಕಂಡರೆ ಶಾಸನ ಪೂರ್ವಕವಾದ ಅಧಿಕಾರ ಅವರಿಗೆ ಕೊಡಿ, ಈ ಅಳತೆಗೆ ತಿದ್ದುಪಡಿ ಶಾಸನಮಾಡಿ ಎಂದು ಹೇಳುತ್ತಿದ್ದೇನೆ. ಬಹುಶಃ ಯಾವ ದೃಷ್ಟಿಯಿಂದ ಮಾಡಬಾರದೆಂದಿದ್ದಾರೋ ಗೊತ್ತಿಲ್ಲ. ಪೋಲೀಸು ಇಲಾಖೆಯಲ್ಲಿ ಡೆಪ್ಯುಟಿ ಕಮಿಷನರಿಗಿರುವ ಅಧಿಕಾರ ಡಿ. ಐ. ಜಿ.ಗೆ ಇಲ್ಲ. ಪೋಲೀಸು ಇಲಾಖೆಯಲ್ಲಿ ರೂಲ್ಸ್ ಪ್ರಕಾರ ಐ. ಜಿ. ಪಿ. ಇಲಾಖಾ ಮುಖ್ಯಾಧಿಕಾರಿಯಾಗಿದ್ದಾರೆ. ಡಿ. ಐ. ಜಿ. ಎಂದು ಹೇಳುವಾಗ ಡೆಪ್ಯುಟಿ ಎಂಬ ಪದಕ್ಕೆ ಅರ್ಥವೇ ಇಲ್ಲ. ಈಗ ಡಿ. ಎಸ್. ಪಿ. ಮೇಲೆ ಅಪೀಲು ಡೆಪ್ಯುಟಿ ಕಮಿಷನರಿಗಿದೆ; ಡಿ. ಐ. ಜಿ.ಗೆ ಇಲ್ಲ. ಆದ್ದರಿಂದ ಕೇವಲ ಪೋಸ್ಟ್ ಆಫೀಸು ತರಹ ಇದ್ದರೆ ಈ ಅಧಿಕಾರಿಯ ಸ್ಥಾನ ತಪ್ಪಿಸಿ ; ಅಥವಾ ಆಡಳಿತ ದೃಷ್ಟಿಯಿಂದ ಬೇಕೇ ಬೇಕು ಎಂದು ಕಂಡರೆ ಆ ಸ್ಥಾನಕ್ಕೆ ಶಾಸನದತ್ತವಾದ ಅಧಿಕಾರ ಕೊಟ್ಟು ತನ್ಮೂಲಕ ಆ ಇಲಾಖೆಯ ಆಡಳಿತದ ದಕ್ಷತೆಯನ್ನು ಹೆಚ್ಚಿಸತಕ್ಕದ್ದು ಎಂದು ನಾಲ್ಕು ವರ್ಷಗಳಿಂದ ಹೇಳುತ್ತಿದ್ದೇನೆ ; ಏನು ಕಾರ್ಯಕ್ರಮ ಕೈಗೊಂಡಿದ್ದಾರೋ ಗೊತ್ತಿಲ್ಲ, ಅದು ನಮಗೆ ಇದುವರೆಗೂ ತಿಳಿದಿಲ್ಲ. ಮತ್ತು ಈಗ ಬರು ಬರುತ್ತಾ ಖರ್ಚು ಹೆಚ್ಚುಹೆಚ್ಚಾಗುತ್ತಾ ಕ್ರೈಮ್ಸ್ ಬಹಳ ಹೆಚ್ಚಾಗುತ್ತಿದೆ. ಈಗ ಸರ್ಕಾರದವರು ಕೊಟ್ಟಿರುವ ವರದಿಯೇನಿದೆಯೋ ಅದರ ಪ್ರಕಾರ ವರ್ಷೇ ವರ್ಷೇ ಕ್ರೈಮ್ಸ್ ಸಂಖ್ಯೆ ಬಹಳ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣವೇನು ? ಹಾಗೆಯೇ ಈಗ ನಮಗೆ ಬೊಂಬಾಯಿ, ಮದರಾಸು ಮತ್ತು ಹೈದರಾಬಾದು ಈ ಭಾಗಗಳ ಕೆಲವು ಪ್ರದೇಶ ಸೇರಿ ಒಂದು ವಿಶಾಲವಾದ ಮೈಸೂರು ಆಗುವ ಕಾಲ ಬಂದಿದೆ. ಈಗಲಾದರೂ ಈ ಇಲಾಖೆಗಳಲ್ಲಿ ಇನ್ಸ್‌ಪೆಕ್ಟರ್ ಅವರಿಗೆ ಏನು ಅಧಿಕಾರ ಕೊಡಬೇಕು, ಅವರ ಆಡಳಿತ ವ್ಯಾಪ್ತಿ ಎಷ್ಟಿರಬೇಕು ಎಂಬುದನ್ನು ನೋಡಿ ಅದಕ್ಕೆ ತಕ್ಕ ಮಾರ್ಪಾಡು ಮಾಡಿ ದಕ್ಷತೆ ಹೆಚ್ಚಿಸುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಂದು ನಂಬಿದ್ದೇನೆ.

ಮತ್ತೊಂದು ವಿಷಯ. ಈಗ ಈ ಇಲಾಖೆಗೆ ಮೋಟಾರ್ ಕಾರು ತೆಗೆದುಕೊಳ್ಳಬೇಕು, ವೈರ್‌ಲೆಸ್ ಸೆಟ್ ತೆಗೆದುಕೊಳ್ಳಬೇಕು ಎಂಬ ಮನವಿಯಿದೆ. ಮನವಿಗಳಲ್ಲಿ ಎಷ್ಟು ಬೇಕೆಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಕಳೆದ ಮೂರು ವರ್ಷಗಳಿಂದ 1½ ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಪೋಲೀಸ್ ಇಲಾಖೆ ವಾಹನಗಳಿಗೆ ಇಷ್ಟು ರೂಪಾಯಿಗಳು ಬೇಕೆಂದು ಕೇಳಿರುವುದಕ್ಕೆ ವಿವರ ಕೊಡಬೇಕು. ಎಷ್ಟು ವರ್ಷಗಳವರೆಗೆ ಅಲಾಟ್‌ಮೆಂಟ್ ಆಗಬೇಕು, ಎಷ್ಟು ಅಗತ್ಯವಿದೆ ಎಂಬುದನ್ನು ನಮಗೆ ತಿಳಿಸಬೇಕು.

ಮತ್ತೊಂದು ವಿಷಯ ಹೇಳಬೇಕೆಂದಿದ್ದೇನೆ. ಈ ಪೋಲೀಸ್ ಇಲಾಖೆಯಲ್ಲಿ ಕನ್ನಡ ಷಾರ್ಟ್‌ಹ್ಯಾಂಡ್ ಅಭ್ಯಾಸ ಮಾಡುವ ಒಂದು ವಿಭಾಗವಿದೆ. ಕನ್ನಡದಲ್ಲೇ ವರದಿಗಳನ್ನು ಕಳುಹಿಸಬೇಕಾದರೆ ಶೀಘ್ರಲಿಪಿಗಾರರ ಅಗತ್ಯ ಬಹಳವಾಗಿದೆ ಅದೂ ನಮ್ಮ ಸಭೆಗಳಲ್ಲಿ ಎಲ್ಲ ಭಾಷೆಗಳಲ್ಲೂ ಈ ಆವಶ್ಯಕತೆಯಿದೆ. ಕನ್ನಡ ಭಾಷೆಯಲ್ಲಿ ನಾವು ಭಾಷಣ ಮಾಡುವುದನ್ನು ಬರೆದುಕೊಳ್ಳುವುದಕ್ಕೆ ಲಿಪಿಗಾರರು ಬೇಕು. ಈಗ ಪೋಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ಒಂದು ವಿಭಾಗವಿದೆ. ಅದರಲ್ಲಿ ದಫೇದಾರರಿಗೆ ಶಿಕ್ಷಣ ಕೊಡುತ್ತಾರೆ, ಬಹುಶಃ ಇತರರನ್ನು ತೆಗೆದುಕೊಳ್ಳಲಾರರು. ದಫೇದಾರರಿಗೆ ಗೊತ್ತಾದ ಅವಧಿಯಲ್ಲಿ ಆ ಶಿಕ್ಷಣವನ್ನು ಕೊಟ್ಟು ಅವರ ಹುದ್ದೆಗಳಿಗೆ ವಾಪಸು ಕಳುಹಿಸುತ್ತಾರೆ. ಹೋದ ಜಾಗದಲ್ಲಿ ಕಲಿತವಿದ್ಯೆಯನ್ನು ಅಭ್ಯಾಸ ಮಾಡುವುದಕ್ಕೆ ಅವರಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಮರೆತಿರುತ್ತಾರೆ. ಪುನಃ ರಿಫ್ರೆಷರ್ ಕೋರ್ಸ್ ಎಂದು ಮಾಡಿದರೆ ಈಗ ಪುನಃ ಶ್ರೀ ಓನಾಮದಿಂದ ಪ್ರಾರಂಭವಾಗಬೇಕಾಗುತ್ತದೆ. ಇದು ಸರಿಯಲ್ಲ. ಅಲ್ಲಿ ಬಹಳ ನುರಿತವರು ಅರಿತವರು ಇದ್ದಾರೆ. ಇದಕ್ಕೆ ಸರಿಯಾದ ಮಾರ್ಗ ಕಂಡುಹಿಡಿದು ತಿಳಿವಳಿಕೆ ಕೊಟ್ಟು ಸರಿಯಾದ ಏರ್ಪಾಡು ಮಾಡಬೇಕಾದದ್ದು ಆವಶ್ಯಕ. ಒಟ್ಟಿನಲ್ಲಿ

1-30 P.M.

ಸರ್ಕಾರದವರು ಈ ಪೋಲೀಸ್ ಇಲಾಖೆಗೆ ಹೆಚ್ಚು ಗಮನಕೊಟ್ಟು ಈ ಕೇಸುಗಳ ಸಂಖ್ಯೆ ಕಡಮೆಯಾಗುವಂತೆ ಈ ಇಲಾಖಾ ಅಧಿಕಾರಿಗಳು ದಕ್ಷತೆಯಿಂದ ಕೆಲಸಮಾಡುವಂತೆ ಮಾಡಬೇಕಾಗಿದೆ. ಆದರೆ ಈ ದಿವಸ ನಮ್ಮ ಸ್ಟೇಟಿನಲ್ಲಿ ಈ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಕೊಡತಕ್ಕ ಸಂಬಳಸಾರಿಗೆಗಳ ದರ್ಜೆ ಬಹಳ ಕಡಮೆಯಾಗಿದೆ. ನಮ್ಮ ಸಂಸ್ಥಾನಕ್ಕೆ ಆ ಬೊಂಬಾಯಿ ಪ್ರಾಂತ್ಯದ ಅನೇಕ ಭಾಗಗಳು ಬಂದು ಸೇರುವುದಿದೆ. ಬೊಂಬಾಯಿ ಪ್ರಾಂತ್ಯದಲ್ಲಿ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ತಿಂಗಳಿಗೆ 40-45 ರೂಪಾಯಿಗಳ ಸಂಬಳವಿದೆ. ನಮ್ಮಲ್ಲಿ ಈ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ 22 ರೂಪಾಯಿಗಳ ಸಂಬಳವಿದೆ. ಈ ನಮ್ಮ ಸಂಸ್ಥಾನದ ನೌಕರ ಮಾನೇರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸಬೇಕೆಂದು ಅನೇಕಸಾರ್ತಿ ಒತ್ತಾಯಪಡಿಸಿದ ನಂತರ ಇಲ್ಲಿ ಒಂದು 'ಪೇಸ್ಟ್ರಕ್ಚರ್' ಕಮಿಟಿ ಎಂದು ನೇಮಕವಾಯಿತು. ಆ ಸಮಿತಿಯವರು ಈ ಅಂಶಗಳನ್ನೆಲ್ಲಾ ವಿಮರ್ಶೆಮಾಡಿ ಸರ್ಕಾರಕ್ಕೆ ಒಂದು ವರದಿ ಒಪ್ಪಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಇತರ ನೌಕರರ ವಿಚಾರ ಹಾಗಿದ್ದರೂ ಇರಲಿ. ಈ ಪೋಲೀಸ್ ಕಾನ್ಸ್‌ಟೇಬಲ್‌ಗಳ ಸಂಬಳವನ್ನು ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳ ಪೋಲೀಸಿನವರ ಮಟ್ಟಕ್ಕೆ ತರುವುದಕ್ಕಾದರೂ ಇವರಿಗೇನು ತೊಂದರೆಯಿದೆ ? ಈ ಅಂಶವನ್ನು ಸರ್ಕಾರದವರು ಕೂಲಂಕಷವಾಗಿ ವಿಮರ್ಶೆಮಾಡಿ, ಈ ಇಲಾಖೆಯಲ್ಲಿ ಏನಾದರೂ ಉಳಿತಾಯ ಮಾಡಲು ಸಾಧ್ಯವಿದೆಯೇ ಈ ಇಲಾಖೆಯನ್ನು ಇನ್ನೂ ಉತ್ತಮಪಡಿಸಲು ಸಾಧ್ಯವಿಲ್ಲವೇ ಎಂಬುದನ್ನೆಲ್ಲಾ ತಿಳಿದುಕೊಳ್ಳುವ ಉದ್ದೇಶದಿಂದ ನಾನು ಈ ಅಂಶಗಳನ್ನು ಈಗ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಅವರು ಸೂಕ್ತ ಉತ್ತರಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈ ಪೋಲೀಸ್ ಇಲಾಖೆಯ ಬಗ್ಗೆ ನಾನಾ ಜನರಲ್ಲಿ ಏನೇನು ಭಾವನೆಗಳುಂಟಾಗಿವೆ ಎನ್ನುವುದರ ಬಗ್ಗೆ ನಾನೀಗ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ.

ಈ ನಗರಗಳಲ್ಲಿ ಕೆಲಸಮಾಡುತ್ತಿರುವ ಪೋಲೀಸ್ ಕಛೇರಿಗಳ ಆಡಳಿತವನ್ನು ತೆಗೆದುಕೊಂಡರೆ—ಇದರಲ್ಲಿ ಎರಡು ಶಾಖೆಗಳಿರುತ್ತವೆ. ಒಂದು ಟ್ರಾಫಿಕ್ ಬ್ರಾಂಚ್ ಎಂದೂ, ಮತ್ತೊಂದು ಕ್ರೈಂ ಬ್ರಾಂಚ್ ಎಂದೂ ಇದರಲ್ಲಿ ಎರಡು ಭಾಗಗಳಿವೆ. ಆದರೆ ಈ ಟ್ರಾಫಿಕ್ ಶಾಖೆಯಲ್ಲಿ ಕೆಲಸಮಾಡತಕ್ಕ ಪೋಲೀಸ್ ಸಿಬ್ಬಂದಿ ಏನಿದೆಯೋ ಅದು ತನ್ನ ಎದುರಿನಲ್ಲೇ ಏನಾದರೂ ತಕ್ರೀರುಗಳು ನಡೆಯುತ್ತಿದ್ದರೆ—ಎಂದರೆ ಈ ಕಳವು ಇತ್ಯಾದಿ ತಕ್ರೀರುಗಳು ನಡೆಯುತ್ತಿದ್ದರೆ ಅವರು ಆ ಕೇಸುಗಳ ಬಗ್ಗೆ ನಿಗಾ ತೆಗೆದುಕೊಳ್ಳುತ್ತಿಲ್ಲ. ಅಥವಾ ನಾವಾ

(ಶ್ರೀ ಪಿ. ಆರ್. ರಾಮಯ್ಯ.)

ಗಿಯೇ ಅಂಥ ಸಂದರ್ಭಗಳೊದಗಿದಾಗ ಈ ತಕ್ಸೀರು ಗಳು ನಡೆದಲ್ಲಿ ಇವರಿಗೆ ಫಿರ್ಯಾದನ್ನು ಕೊಟ್ಟರೆ—ಆಗ ಇವರು ನಾವು ಈ ಫಿರ್ಯಾದುಗಳನ್ನೆಲ್ಲಾ ಹಿಡಿಯು ವುದಿಲ್ಲ; ಅದು ನಮಗೆ ಸಂಬಂಧವಿಲ್ಲ; ನೀವು ಈ ಫಿರ್ಯಾದುಗಳನ್ನು ತೆಗೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್ನಲ್ಲಿ ದಾಖಲ್ಮಾಡಿ ಎಂಬುದಾಗಿ ಹೇಳುತ್ತಾರೆ. ಉದಾಹರಣೆಗಾಗಿ ಹೇಳುವುದಾದರೆ—ಕೆಲವು ದಿವಸ ಗಳ ಕೆಳಗೆ ನಾನು ಆ ಕಲಾಸಿಪಾಳ್ಯದ ಬಸ್‌ಸ್ಟಾಂಡಿಗೆ ಹೋಗಿದ್ದಾಗ ಅಲ್ಲಿ ಒಂದು ಸಂಸಾರದವರು ದೇವರ ದರ್ಶನಕ್ಕಾಗಿ ತಿರುಪತಿಗೆ ಹೋಗತಕ್ಕವರಾಗಿದ್ದರು. ಅವರು ಅಲ್ಲಿ ಟಿಕೆಟ್ಟುಗಳನ್ನು ಪಡೆದು ಬಸ್ಸಿನಲ್ಲಿ ಹತ್ತು ವುದರೊಳಗಾಗಿ ಅವರು ಇಟ್ಟುಕೊಂಡಿದ್ದ 150 ರೂಪಾಯಿಗಳನ್ನು ಯಾರೋ ಪಿಕ್-ಪಾಕೆಟ್ ಮಾಡಿ ಬಿಟ್ಟರು. ಆ ವೇಳೆಯಲ್ಲಿ ಅಲ್ಲೇ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಕೂಡ ಇದ್ದ. ಆಗ ಅವರು ದಿಕ್ಕು ಕೆಟ್ಟುಹೋದರು.

ಒಬ್ಬ ಮಾನ್ಯ ಸದಸ್ಯರು.—ಏನು ಆ ಪೋಲೀಸಿ ನವರೇ ಹೊಡೆದುಬಿಟ್ಟರೋ? (ನಗು).

ಶ್ರೀ ಪಿ. ಆರ್. ರಾಮಯ್ಯ.—ಆ ರೀತಿ ನಾನು ಹೇಳಲಾರೆ. ಆ ವಿಚಾರವನ್ನು ನಾನು ಹೇಳುವುದ ಕ್ಕಾಗುವುದಿಲ್ಲ. ಆಗ ಆ ಜನರು ಆ ವಿಚಾರವನ್ನು ಅಲ್ಲೇ ಇದ್ದ ಟ್ರಾಫಿಕ್ ಪೋಲೀಸಿನವರಿಗೆ ತಿಳಿಸಿದರು. ಪಾಪ! ಅವರು ಹಳ್ಳಿಜನರು! ಅವರಿಗೆ ಈ ಟ್ರಾಫಿಕ್-ಪೋಲೀಸ್ ಎಂದರೇನು ಎಂಬ ವಿಚಾರಗಳೆಲ್ಲ ಗೊತ್ತಿರ ಲಿಲ್ಲ. ಏನಾದರೂ ಮಾಡಿ ಆ ಹಣವನ್ನು ಪತ್ತೆಮಾಡಿ ಕೊಡಿಸಬೇಕೆಂದು ಅವರು ಕೇಳಿಕೊಳ್ಳುತ್ತಿದ್ದರು. ಆಗ ಆ ಪೋಲೀಸಿನವರು ಇದು ನಮಗೆ ಸಂಬಂಧ ವಿಲ್ಲ, ನೀವು ಆ ಕಲಾಸಿಪಾಳ್ಯಂ ಪೋಲೀಸ್ ಸ್ಟೇಷನ್ಗೆ ಹೋಗಿ ವರದಿ ಮಾಡಿ ಎಂದು ತಿಳಿಸಿಬಿಟ್ಟರು. ಹಾಗೆ ಅವರು ಹೇಳಿದ್ದು ಎಷ್ಟು ಅವ್ಯವಹಾರಿಕವಾದು ದಾಗಿದೆ ಎನ್ನುವುದು ತಮ್ಮೆಲ್ಲರಿಗೂ ಗೊತ್ತಾಗಲಿ ಎಂಬ ಉದ್ದೇಶದಿಂದ ಹೇಳಿದೆನು. ಇತ್ತೀಚೆಗೆ ಈ ಬೆಂಗಳೂರು ನಗರದಲ್ಲಿ ಈ ಪಿಕ್‌ಪಾಕೆಟ್ ಅಫೆನ್ಸ್ ಗಳು ವಿಶೇಷವಾಗಿ ನಡೆಯುತ್ತಿವೆ. ಈ ನಗರಕ್ಕೆ ಹೊರಗಡೆಯಿಂದ ಹೊಸ ಹೊಸ ಜನರು ಬರುತ್ತಿರು ವುದು ಜಾಸ್ತಿಯಾಗುತ್ತಿದೆ. ಇಲ್ಲಿ ನಿರುದ್ಯೋಗಿ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಒಟ್ಟಿನಲ್ಲಿ ಹೇಳುವು ದಾದರೆ ಈ ಪಟ್ಟಣಗಳು ದಿನೇದಿನೇ ಈ ನಿರುದ್ಯೋಗ ತಂಡದ ಜನಗಳಿಗೆ ಆವಾಸಸ್ಥಾನಗಳಾಗುತ್ತಾ ಬರುತ್ತಿವೆ. ಈ ಜನರಿಗೆ ಯಾವ ಉದ್ಯೋಗಗಳೂ ಸಿಕ್ಕುವಹಾಗಿಲ್ಲ. ಈ ನಾನಾ ಕಾರಣಗಳಿಂದ ಇತ್ತೀ ಚೆಗೆ ಹೆಣ್ಣುಮಕ್ಕಳು ಬೀದಿಗಳಲ್ಲಿ ಧೈರ್ಯವಾಗಿ ತಿರುಗಾಡುವ ಹಾಗಿಲ್ಲ. ಅವರ ಆಭರಣಗಳನ್ನೆಲ್ಲಾ ಕಿತ್ತುಕೊಂಡು ಹೋಗುತ್ತಿದ್ದಾರೆ. ಈ ನಿರುದ್ಯೋಗಿ ಜನರ ಚಲನವಲನಗಳನ್ನು ಕಂಡುಹಿಡಿಯುವುದಕ್ಕೇ ಆಗುವುದಿಲ್ಲ. ಏನೋ ಬಹಳ ದೊಡ್ಡಮನುಷ್ಯರ ಹಾಗೆ ಬಂದುಬಿಡುತ್ತಾರೆ. ಹಾಗೆ ಬಂದವರು ಈ ಹೆಣ್ಣುಮಕ್ಕಳಿಗೆ ಏನೋ ಸಹಾಯ ಮಾಡುವವರ ಹಾಗೆ ನಟಿಸುತ್ತ ಆ ಮಕ್ಕಳನ್ನು ಬನ್ನಿ ನಿಮ್ಮನ್ನ ಸರಿ ಯಾದ ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತೇವೆಂದು ಹೇಳಿ ಅವರನ್ನು ಯಾವುದೋ ಕಡೆಗೆ ಕರೆದುಕೊಂಡು ಹೋಗಿ ಅವರ ಮೈಮೇಲಿದ್ದಂಥ ಆಭರಣಗಳನ್ನೆಲ್ಲಾ ಕಿತ್ತುಕೊಂಡು ಹೋಗಿಬಿಡುತ್ತಾರೆ. ನಾನು ಈ ವಿಚಾರ ಗಳನ್ನೇನೂ ಹೊಸದಾಗಿ ಹೇಳುತ್ತಿಲ್ಲ. ಈ ವಿಚಾರ ಗಳೆಲ್ಲಾ ಈಗಾಗಲೇ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಚಾರಗಳೇ ಆಗಿರುತ್ತವೆ. ನಾವು ಈ ನಮ್ಮ ನಗರ ಗಳಲ್ಲಿರತಕ್ಕಂಥ ಪೋಲೀಸ್ ಸಿಬ್ಬಂದಿಗಾಗಿ ಇಷ್ಟೊಂದು ಹಣವನ್ನು ಖರ್ಚುಮಾಡುತ್ತಿದ್ದಾಗ್ಯೂ ಇಂಥ ಹೀನ ಕೃತ್ಯಗಳು ನಡೆಯುತ್ತಿರುವುದಕ್ಕೆ ಕಾರಣವೇನು? ಇದಕ್ಕೆಲ್ಲಾ ಅವರಿಗೆ ಹೇಗೆ ಅವಕಾಶವಿರುತ್ತದೆ? ಪೋಲೀಸಿನವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆಯೇ? ಇಂಥ ಕೃತ್ಯಗಳನ್ನು ತಡೆ ಗಟ್ಟಲು ಸರ್ಕಾರದವರಿಗೇನೂ ಸಾಧ್ಯವೇ ಇಲ್ಲವೇ ಎಂಬುದನ್ನು ನಾನೀಗ ಕೇಳಬೇಕಾಗಿದೆ. ನಾನು ಇಷ್ಟೆಲ್ಲಾ ಹೇಳಿದ್ದೇನೆ. ಆದರೆ ಎಷ್ಟೋ ಸಂದರ್ಭ ಗಳಲ್ಲಿ ನನಗೇನೇ ಆ ಪೋಲೀಸಿನವರು ಇಂಥ ಕಡಮೆ ಸಂಬಳದ ಮೇಲೆ ಹೇಗೆ ಜೀವನ ನಡೆಸುತ್ತಾರೆ ಇವರು ದಿನಪೂರ್ತಾ ಹೀಗೆ ನಿಂತ ಕಡೆಯಲ್ಲೇ ನಿಂತಿರ ಬೇಕಾದರೆ ಎಷ್ಟು ಕಷ್ಟವಾಗುತ್ತದೆ ಎಂದು ನನ್ನ ಮನಸ್ಸಿನಲ್ಲೇ ಯೋಚನೆಗಳು ಬಂದು ನಾನು ಅವರ ಬಗ್ಗೆ ಕನಿಕರವನ್ನೂ ಪಟ್ಟಿದ್ದೇನೆ. ಒಂದೊಂದು ಸಾರ್ತಿ ಅವರನ್ನು ನೋಡಿದರೆ ಹೀಗೆ ಕನಿಕರವೂ ಬರುತ್ತದೆ. ಇವರಮೇಲೆ ನಾವೇತಕ್ಕೆ ಆಪಾದನೆ ಮಾಡಬೇಕು, ಹೀಗೆಲ್ಲಾ ಹೇಳಬಾರದಾಗಿತ್ತಲ್ಲವೇ ಎನ್ನುವ ಭಾವನೆಯೂ ಬರುತ್ತದೆ. ಆದರೆ ಇಂಥ ನಾಗರಿಕರಿರತಕ್ಕಂಥ ನಗರಗಳಲ್ಲೇ ಈ ರೀತಿ ಅಕೃತ್ಯ ಗಳು ನಡೆಯುತ್ತಿರುವುದನ್ನು ನೋಡಿದರೆ ಇವುಗಳನ್ನು ಯಾವ ಯಾವ ರೀತಿ ತಪ್ಪಿಸಬೇಕು ಎಂಬುದನ್ನು ಈ ಪೋಲೀಸ್ ಇಲಾಖೆಯವರು ತಮ್ಮ ಗಮನಕ್ಕೆ ತೆಗೆದು ಕೊಳ್ಳದೆ ಉದಾಸೀನ ಮಾಡಿರತಕ್ಕಂಥ ನಿದರ್ಶನಗಳು ಅನೇಕವಾಗಿವೆ. ಹಿಂದೆ ರಾತ್ರಿ ಕಾಲದ ಬೀಟುಗಳು ಸರಿಯಾಗಿ ಚೆನ್ನಾಗಿ ನಡೆಯು ತ್ತಿದ್ದವು. ಈಚೆಗೆ ಇದು ಸರಿಯಾಗಿ ನಡೆಯು ತ್ತಿಲ್ಲ. ಈಗ ಈ ಬೀಟ್ ತಿರುಗುವುದು ಬಹಳ ಕಡಮೆ ಯಾಗಿದೆ. ಈ ದಿವಸ ನಾವುಗಳೇ ಕೈಯಿಂದ ದುಡ್ಡು ಕೊಟ್ಟು ರಾತ್ರಿಕಾವಲನ್ನು ಘೂರ್ಕರಿಂದ ನಡೆಸಿ ಕೊಂಡು ಹೋಗಬೇಕಾದಂಥ ಕಾಲ ಬಂದಿದೆ. ಈ ವಿಚಾರಗಳನ್ನೆಲ್ಲಾ ನಾನೀಗ ಸರ್ಕಾರದವರ ಗಮ ನಕ್ಕೂ ಮತ್ತು ಪೋಲೀಸ್ ಇಲಾಖಾ ಗಮನಕ್ಕೂ ತಂದಹಾಗಾಯಿತು. ಇಲ್ಲಿಯವರೆಗೂ ನಮ್ಮ ಸಿಟಿ ಯಲ್ಲಿರತಕ್ಕಂಥ ಪೋಲೀಸಿನವರಿಗೆ ಈ ಜೇಬು ಕಳ್ಳ ರನ್ನು ಪತ್ತೆಮಾಡಿ, ಈ ಕೃತ್ಯಗಳನ್ನು ತಡೆಗಟ್ಟು ವುದಕ್ಕೆ ಸಾಧ್ಯವಾಗಿಲ್ಲ. ಇವು ದಿನೇ ದಿನೇ ಹೆಚ್ಚಾಗು ತ್ತಿವೆ. ಈ ಕೃತ್ಯಗಳು ಈಗ ಸಿಟಿಮಾರ್ಕೆಟ್, ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡ್, ರೈಲ್ವೆಸ್ಟೇಷನ್ ಇಂಥ ಕಡೆಗಳಲ್ಲಿ ವಿಶೇಷವಾಗಿ ನಡೆಯುತ್ತಿರುತ್ತವೆ. ಈ ವಿಚಾರಗಳಿಗೆ ಟ್ರಾಫಿಕ್ ಪೋಲೀಸಿನವರು ಗಮನವನ್ನೇ ಕೊಡುವುದಿಲ್ಲ. ಆದರೆ ಈಗ ಟ್ರಾಫಿಕ್ ವಿಚಾರವನ್ನೇ ತೆಗೆದುಕೊಳ್ಳೋಣ. ನಮ್ಮ ಸಿಟಿಯಲ್ಲಿ ಇಷ್ಟೊಂದು ಟ್ರಾಫಿಕ್ ರೆಗ್ಯುಲೇಷನ್, ಪೋಲೀಸ್ ಆಕ್ಟ್ ಎಲ್ಲಾ ಇದ್ದರೂ ಎಷ್ಟು ಭಯಂಕರ ವಾದಂಥ ಎಷ್ಟು ಆಕ್ಸಿಡೆಂಟ್ಸ್ ಆಗುತ್ತಿವೆ! ಇವರಿಗೆ ಇಂಥ ಆಕ್ಸಿಡೆಂಟ್‌ಗಳನ್ನು ತಪ್ಪಿಸುವುದ ಕ್ಕಾಗುತ್ತಿರಲಿಲ್ಲವೇ ಎಂದು ನಾನೀಗ ಪ್ರಶ್ನೆ ಮಾಡ ಬೇಕಾಗಿದೆ. ಮೋಟಾರ್‌ಗಳು, ಕೆಲವು ಆಟೋ ಮೊಬೈಲ್‌ಗಳೂ, ಲಾರಿಗಳೂ ಇವುಗಳನ್ನೆಲ್ಲ ಸರಿಯಾಗಿ ಕಾಲಕಾಲಕ್ಕೆ ಇನ್‌ಸ್ಪೆಕ್ಷನ್ ಮಾಡಿ ನೋಡುತ್ತಿಲ್ಲ. ಹಾಗೆ ಅವುಗಳನ್ನು ಒಂದು ವಿಧಾಯಕವಾದ ರೀತಿ ಯಲ್ಲಿ ಪರೀಕ್ಷೆಮಾಡದೆ ಇರುವುದರಿಂದ ಹೀಗೆಲ್ಲಾ ಆಕ್ಸಿಡೆಂಟ್‌ಗಳಾಗಲು ಅವಕಾಶವಾಗಿರುತ್ತದೆ. ಎಲ್ಲಾ ಇಲಾಖೆಗಳಿಗಿಂತಲೂ ಈ ಪೋಲೀಸ್ ಇಲಾಖೆ ಎನ್ನು ವುದು ಬಹಳ ಸನಾತನವಾದಂಥ ಇಲಾಖೆ. ಈ ದಿವಸ

ಗ್ರಾಮಗಳಲ್ಲಿ ನೂರಕ್ಕೆ 95 ಜನರು ವಾಸಮಾಡು ತ್ತಿದ್ದಾರೆ. ಅಲ್ಲಿ ಯಾವ ಪೋಲೀಸ್ ಸಿಬ್ಬಂದಿಯೂ ಇಲ್ಲ. ಅಂಥ ಕಡೆಗಳಲ್ಲಿ ಜನರು ಬಹಳ ನೆಮ್ಮದಿ ಯಿಂದಿದ್ದಾರೆ. ಆದರೆ ಈ ಸಿಟಿಗಳಲ್ಲಿ ಈ ದಿವಸ ಇಷ್ಟೊಂದು ಪೋಲೀಸರಿದ್ದಾಗ್ಗೂ ಆ ಹಳ್ಳಿ ಜನರ ನೆಮ್ಮದಿ ನಮಗಿಲ್ಲ ಎಂಬ ಅಂಶವನ್ನು ಈ ನಿದರ್ಶನ ಗಳಿಂದ ನಾವು ಊಹಿಸಬಹುದಾಗಿದೆ. ಇನ್ನು ಈ ನಗರಗಳಲ್ಲೇ ಈ ಕಳವು-ಬರ್ಗ್ಲರಿ ಇತ್ಯಾದಿ ಕೃತ್ಯಗಳೂ ಜಾಸ್ತಿಯಾಗುತ್ತಿವೆ. ಇವುಗಳನ್ನು ತಪ್ಪಿಸುವುದೇ ಬಹಳ ಕಷ್ಟವಾಗಿದೆ. ಹಾಗೇ ಆಲೋಚನೆ ಮಾಡಿದಲ್ಲಿ ಈ ಪೋಲೀಸ್ ಇಲಾಖೆ ಒಂದರಿಂದಲೇ ಈ ಕಾರ್ಯ ಅಷ್ಟು ಯಶಸ್ವಿಯಾಗಿ ನಡೆಯಲಾರದೆಂದೂ ಇದಕ್ಕಾಗಿ ಈ ನಾಗರಿಕ ನಗರದ ಜನರ ಸಹಕಾರ ವನ್ನು ಯಾವ ರೀತಿ ಪಡೆದುಕೊಂಡರೆ ಈ ಕೃತ್ಯಗಳ ನ್ನೆಲ್ಲಾ ತಡೆಗಟ್ಟಲು ಸಾಧ್ಯವಿದೆ ಎಂಬುದನ್ನು ಈಗ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಬಹಳ ಮಟ್ಟಿಗೆ ವಿದ್ಯಾವಂತ ತರುಣರು ನಿರುದ್ಯೋಗಿ ಗಳಾಗಿದ್ದಾರೆ; ಈ ಯುವಕರಿಗೆ ಈ ದಿವಸ ಯಾವ ಕೆಲಸವೂ ಇಲ್ಲ. ಆದ್ದರಿಂದ ಇಂಥ ಜನರ ಸಹಕಾರ ವನ್ನು ಯಾವ ರೀತಿ ಬಳಸಬಹುದೆಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಯಾವ ಕೆಲಸವೂ ಇಲ್ಲ ದಿರತಕ್ಕಂಥ ಜನರು ಸೇರಿಕೊಂಡು ಅವರ ಒಂದು ಗ್ಯಾಂಗ್‌ನ್ನು ಕಟ್ಟಿಕೊಂಡಿದ್ದಾರೆ. ಇವರ ಜೊತೆಗೆ ಇನ್ನು ಚಿತ್ತೂರು, ಸೇಲಂ, ವೆಲ್ಲೂರು ಇತ್ಯಾದಿ ಕಡೆಗಳಿಂದ ಎಷ್ಟೋ ಜನರು ಇಲ್ಲಿಗೆ ಹೊಸಹೊಸದಾಗಿ ದಿನೇದಿನೇ ಬಂದು ಇಳಿಯುತ್ತಿದ್ದಾರೆ. ಹೀಗೆ ಬರತಕ್ಕ ಜನರ ಸಂಖ್ಯೆ ಏನೆಂಬುದನ್ನು ಯಾರೂ ಗಮನವಿಟ್ಟು ನೋಡುತ್ತಿಲ್ಲ. ಹೀಗೆ ಜೀವನಕ್ಕೆ ಎಲ್ಲಿಯೂ ಆಧಾರ ವಿಲ್ಲದಂಥ ಜನಗಳೆಲ್ಲ ಈ ನಗರಕ್ಕೆ ಬರುತ್ತಿರುವುದು ಬಹಳ ಜಾಸ್ತಿ ಆಗುತ್ತಿದೆ. ನಾನು ಎಷ್ಟೋ ಸ್ಲಂ ಏರಿಯಾಗಳಲ್ಲಿ ತಿರುಗುತ್ತಿದ್ದೇನೆ. ಆದರೆ ಅಲ್ಲಿ ಒಂದು ಕೃತ್ಯಗಳೂ ನಡೆದಿಲ್ಲ. ಈ ಪೋಲೀಸ್ ಸಿಬ್ಬಂದಿಯ ವಿಚಾರದಲ್ಲಿ ನನಗೆ ಬಹಳ ಸಹಾನುಭೂ ಇದೆ. ಈ ಇಲಾಖೆಯಲ್ಲಿ ಬಹಳ ಸಾಮರ್ಥ್ಯಸ್ಥರೂ ಇದ್ದಾರೆ. ಈ ಇಲಾಖೆಯಲ್ಲಿ ಈ ಆರ್ಗನೈಜೇಷನ್ ಎನ್ನುವುದು ಇನ್ನೂ ಹೆಚ್ಚಾಗಿ ಆಗಬೇಕು. ಈ ವಿಷಯಗಳನ್ನೆಲ್ಲ ಪರಿಶೀಲನೆಮಾಡಲು ಸರ್ಕಾರದವರು ಒಂದು ಸಮಿತಿಯನ್ನು ಬೇಕಾದರೂ ನೇಮಕಮಾಡ ಬಹುದು. ಇದರ ಸಂಬಂಧದಲ್ಲಿ ತಾವು ಕಾರ್ಪೊ ರೇಷನ್ ಸಹಾಯವನ್ನು ಕೂಡ ತೆಗೆದುಕೊಳ್ಳಬಹುದು. ಅಂತೂ ಒಟ್ಟಿನಲ್ಲಿ ಏನೇನು ಸಾಧ್ಯವಿದೆಯೋ ಅದ ನ್ನೆಲ್ಲಾ ನಡೆಸಿ ಈ ಕಳವು-ಜೇಬು ಕಳ್ಳತನ-ಇತ್ಯಾದಿ ಅಪರಾಧಗಳನ್ನು ತಡೆಗಟ್ಟಲು ಪ್ರಯತ್ನ ಮಾಡಬೇಕು. ಇನ್ನು ಈ ಬೆಂಗಳೂರಿನಲ್ಲಿ ಕೃಷ್ಣರಾಜೇಂದ್ರ ರೋಡಿ ನಲ್ಲೂ, ಅವೆನ್ಯೂ ರಸ್ತೆಯಲ್ಲೂ, ಟ್ರಾಫಿಕ್ ಬಹಳ ಜಾಸ್ತಿ ಆಗಿದೆ. ಅಲ್ಲಿ ತಿರುಗಾಡುವುದೇ ಬಹಳ ಕಷ್ಟ ವಾಗಿದೆ. ಬಳೇಪೇಟೆಯಲ್ಲಂತೂ ಈ ಟ್ರಾಫಿಕ್ most congested. ಅಲ್ಲಿ ಸಾಯಂಕಾಲದ ವೇಳೆ ಯಲ್ಲಿ ಇರುವೆ ಕೂಡ ಸಂಚರಿಸಲು ಸಾಧ್ಯವಿಲ್ಲ. ಅಲ್ಲಿ ಅಷ್ಟು ಹೆವಿ ಟ್ರಾಫಿಕ್ ಇದೆ. ಇಂಥ ರಸ್ತೆಗಳ ಬಗ್ಗೆ One-Way Traffic ಏರ್ಪಡಿಸತಕ್ಕದ್ದು ಅತ್ಯ ಗತ್ಯ. ದೊಡ್ಡಪೇಟೆಗೂ One-Way Traffic ಮಾಡಬೇಕಾದದ್ದು ಅಗತ್ಯ. ಜನರ ಹಿತದೃಷ್ಟಿಯಿಂದ ಅವರ ಸುರಕ್ಷತೆಯ ದೃಷ್ಟಿಯಿಂದ ಇದನ್ನು ಆದಷ್ಟು ಬೇಗ ಮಾಡುವುದು ಒಳ್ಳೆಯದು. ಚಿಕ್ಕಪೇಟೆ ಮತ್ತು ಬಳೇಪೇಟೆ ಪೋಲೀಸ್ ಸ್ಟೇಷನ್‌ಗಳಿಗೊಂದು ನೇರವಾದ ಸಂಬಂಧವನ್ನು ಕಲ್ಪಿಸಬೇಕಾದದ್ದು ಆವಶ್ಯಕ. ಇದಕ್ಕಾಗಿ ಮಧ್ಯೆ ಹೊಸರಸ್ತೆಯೊಂದು ಆಗಬೇಕಾದದ್ದು ತೀರಾ ಅಗತ್ಯವಿದೆ. ಈ ರಸ್ತೆಯಾಗದ ವಿನಾ ಪೋಲೀಸ್ ಕೆಲಸಗಳು ಸರಿಯಾಗಿ ನಡೆಯು ವುದಿಲ್ಲ. ನನಗೆ ಗೊತ್ತಿರುವಹಾಗೆ ಈ ಹೊಸ ರಸ್ತೆ ವಿಚಾರವಾಗಿ ಕಳೆದ 25 ವರ್ಷಗಳಿಂದಲೂ ಚರ್ಚೆ ಆಗುತ್ತಲೇ ಇದೆ. ಈ ಟ್ರಾಫಿಕ್ಕನ್ನು ಸರಿಯಾಗಿ ಕಂಟ್ರೋಲ್ ಮಾಡಬೇಕಾಗಿದ್ದರೆ ಈ ಹೊಸ ರಸ್ತೆ ಆಗಲೇಬೇಕು. ಎಷ್ಟೋಸಾರಿ ಪರ್ಸನಲ್ಲಾಗಿ ಇಂಥ ವಿಷಯ ಆಗಿದೆ ಸರಿಪಡಿಸಬೇಕು ಎಂದು ಮಿನಿಸ್ಟರ್ ಅವರ ಗಮನಕ್ಕೆ ತಂದಿದ್ದೇವೆ. ಅವರೂ ಗಮನ ಕೊಟ್ಟಿ ದ್ದಾರೆ. ಆದರೂ ಕೂಡ ಇನ್ನೂ ಈ ಇಲಾಖೆಯನ್ನು ಸರಿಯಾಗಿ ಮಾರ್ಪಾಡು ಮಾಡಬೇಕೆಂದು ನಾನು ವಿನಯವಾಗಿ ಸಲಹೆ ಮಾಡುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಪೋಲೀಸ್ ಇಲಾಖೆಯ ವ್ಯವಸ್ಥೆಯನ್ನು ಪುನರ್ ವ್ಯವಸ್ಥೆಮಾಡಬೇಕೆನ್ನುವ ವಿಚಾರದಲ್ಲಿ ಒಂದೆ ರಡು ವಿಚಾರಗಳನ್ನು ಹೇಳಬೇಕೆಂದು ನನ್ನಲ್ಲಿ ಬಹಳ ಆಸಕ್ತಿ ಇತ್ತು. ಅದನ್ನು ಹೇಳಬೇಕೆಂದಿದ್ದೇನೆ. ಈ ಪೋಲೀಸ್ ಇಲಾಖೆಯವರು ಯಾರನ್ನೂ ಕೇಳದೆ ಅವರೇ ತಮಗೆ ಇಷ್ಟಬಂದಂತೆ ಯಾವ ವ್ಯವಸ್ಥೆಬೇಕೋ ಆ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾ ಇದ್ದಾರೆ. ಮೈಸೂರು ದಕ್ಷಿಣ ತಾಲ್ಲೂಕಿನಲ್ಲಿ ಒಂದು ಪೋಲೀಸ್ ಸ್ಟೇಷನ್ ಬಹಳ ಕಾಲದಿಂದ ಇತ್ತು, ಮೈಸೂರಿಗೆ 5 ಮೈಲಿ ದೂರದಲ್ಲಿ ಅಣಕಲ್ ಎಂಬ ಒಂದು ಗ್ರಾಮ ಇದೆ. ಆ ಗ್ರಾಮದಲ್ಲಿದ್ದ ಪೋಲೀಸ್ ಸ್ಟೇಷನನ್ನು ತೆಗೆದು ಬೇರೆ ಕಡೆಗೆ ಬದಲಾಯಿಸಿದ್ದಾರೆ. ಅಲ್ಲಿ ಏನೇನೂ ಸೌಕರ್ಯವಿಲ್ಲ, ಅಲ್ಲಿಗೆ ಹೋಗಬೇಕಾದರೆ ಬಸ್ಸಿನಲ್ಲಿ ಹೋಗಬೇಕು, ಇಲ್ಲದೇ ಇದ್ದರೆ ನಡೆದು ಕೊಂಡು ಹೋಗಬೇಕು. ಅದೂ ಅಲ್ಲದೆ ಅಲ್ಲಿ ಬೇರೆ ಇನ್ಯಾವ ಅನುಕೂಲವೂ ಇಲ್ಲ. ಇಂಥ ವ್ಯವಸ್ಥೆ ಯನ್ನು ಪೋಲೀಸ್‌ನವರು ಮಾಡಿಕೊಂಡಿದ್ದಾರೆ. ಇದು ಸರ್ಕಾರದವರಿಗೆ ಗೊತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಅಲ್ಲಿನ ಡೆಪ್ಯೂಟಿ ಕಮೀಷನರನ್ನಾಗಲಿ, ಅಮಲ್ದಾರರ ನ್ನಾಗಲಿ ಅಥವಾ ಆ ತಾಲ್ಲೂಕಿನಲ್ಲಿರತಕ್ಕ ಈ ಸಭೆಯ ಸದಸ್ಯರಾದ ನಮ್ಮನ್ನಾಗಲಿ ಈ ರೀತಿ ಮಾಡಿದರೆ ಅನುಕೂಲವೇ, ಅನಾನುಕೂಲವೇ ಎಂಬ ವಿಷಯ ವನ್ನು ಯಾರೂ ಕೂಡ ಕೇಳಿಲ್ಲ. ಆ ರೀತಿ ಕೇಳಿರುವುದು ನನಗೆ ಗೊತ್ತಿಲ್ಲ. ಅಲ್ಲಿಗೆ ನಾನು ಮೊನ್ನೆ ಭಾನುವಾರ ಹೋಗಿದ್ದೆ. ಅಲ್ಲಿ ಒಂದು ಜಗಳ ಆಯಿತು, ಆ ವಿಷಯ ವನ್ನು ಪೋಲೀಸ್‌ನವರಿಗೆ ತಿಳಿಸಬೇಕೆಂದು ಪೋಲೀಸ್ ಸ್ಟೇಷನ್ನಿಗೆ ಅನೇಕರು ಹೋದರು. ಹೋದರೆ ಅಲ್ಲಿ ಪೋಲೀಸ್‌ನವರು ಇರಲೇ ಇಲ್ಲ. ಅವರು ಎಲ್ಲಿರು ತ್ತಾರೋ ಏನೋ ಒಂದೂ ಗೊತ್ತೇ ಆಗುವುದಿಲ್ಲ. ಕೊನೆಗೆ ನನ್ನ ಹತ್ತಿರ ಬಂದು ದೂರು ಕೊಟ್ಟರು. ನಾನು ಹೋಂ ಮಿನಿಸ್ಟರ್‌ಗೆ ಹೇಳಿದೆ. ಅದು ಒಂದು ಕಥೆ ಅನ್ನಿ!

ಒಬ್ಬ ಸದಸ್ಯರು.—ಹೋಂ ಮಿನಿಸ್ಟರ್ ಅವರಿಗೆ ನೀವೇ ಹೇಳಿದ್ದೀರಲ್ಲಾ ಇನ್ನೇನು!

ಶ್ರೀ ಶಿವನಂಜೇಗೌಡ.—ಈ ರೀತಿ ಒಂದು ವ್ಯವಸ್ಥೆ ಮಾಡುವಾಗ ಅವರ ಮನಸ್ಸಿಗೆ ಬಂದಂತೆ ಯಾರನ್ನೂ ಕೇಳದೆ, ಯಾರಿಗೂ ಗೊತ್ತಿಲ್ಲದೇ ಈ ರೀತಿ ಬದಲಾಯಿ ಸುವುದು ಯಾವ ನ್ಯಾಯ? ಜನಗಳು ಏನು ಮಾಡ ಬೇಕು? ಮೈಸೂರು ಸಿಟಿಯಿಂದ ಸುತ್ತಮುತ್ತಲೂ 15 ಮೈಲಿ ಫಾಸಲೆ ಆಗುತ್ತದೆ. ಎಲ್ಲಿ ಏನೇ ಆದರೂ ಕೂಡ ಎಲ್ಲಕ್ಕೂ ಮೈಸೂರು ಸಿಟಿಗೆ ಬರುವುದಕ್ಕಾಗು ತ್ತದೆಯೇ? ಮೊದಲು ಯಾವ ಅನುಕೂಲ ಇತ್ತೋ ಆ ಅನುಕೂಲವನ್ನು ತಪ್ಪಿಸಿ ಆ ಸ್ಟೇಷನನ್ನು ಬೇರೆ

(ಶ್ರೀ ಶಿವನಂಜೇಗೌಡ.)

ಕಡೆಗೆ ಹಾಕಿದ್ದಾರೆ. ಇದೇನು ಈ ರೀತಿ ಮಾಡಿದ್ದಾರೆ ಎಂದು ಯಾರನ್ನು ಕೇಳಿದರೂ, ಯಾರಿಗೂ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಏಕೆ, ಪೋಲೀಸ್‌ನವರಿಗೆ ಯಾವ ರೀತಿ ಬೇಕೋ ಆ ರೀತಿ ಮಾಡಿಕೊಳ್ಳಬಹುದೇ? ಹಾಗಾದರೆ ನಾವೇಕೆ ಇರುವುದು? ಜನಗಳಿಗೆ ಅನುಕೂಲ ಮಾಡಿಕೊಡಬೇಕು, ಅವರ ಕೆಲಸ ಕಾರ್ಯಗಳನ್ನು ಸುಲಲಿತವಾಗಿ ಜರುಗಿಸಿಕೊಡಬೇಕು, ಅವರ ಕಷ್ಟ ಸುಖ ಕೇಳಬೇಕು, ಅವರು ಸುಖವಾಗಿ ಜೀವನ ನಡೆಸುವುದಕ್ಕೆ ಸೌಕರ್ಯ ಕಲ್ಪಿಸಿಕೊಡಬೇಕು ಎಂದು ಹೇಳುವಾಗ ಈ ರೀತಿ ಅನಾನುಕೂಲ ಮಾಡಿದರೆ ನೀವೆಲ್ಲಾ ಇದ್ದೂ ಕೂಡ ಇಂಥ ಅನ್ಯಾಯವಾಗುತ್ತಾ ಇದೆ ಎಂದು ನಮ್ಮನ್ನು ಆ ಜನಗಳು ಕೇಳದೇ ಬಿಡುತ್ತಾರೆಯೇ? ನಿಜವಾಗಿಯೂ ಸರ್ಕಾರದವರಿಗೆ ಕೆಟ್ಟ ಹೆಸರು ಬಂದೇ ಬರುತ್ತದೆ. ಈ ರೀತಿ ಮಾಡಲಿಕ್ಕೆ ಕಾರಣವೇನು? ಇದನ್ನು ಮಾನ್ಯ ಹೋಂ ಮಿನಿಸ್ಟರವರಿಗೆ ತಿಳಿಸಬೇಕೆಂದು ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮೊದಲೇ ತಿಳಿಸಿದ್ದೇನೆ ಎಂದು ಹೇಳಿದಿರಲ್ಲ!

ಶ್ರೀ ಶಿವನಂಜೇಗೌಡ.—ಆದರೂ ಕೂಡ ಈ ಸಂದರ್ಭದಲ್ಲಿ ಹೇಳಬೇಕಾಗಿ ಬಂದಿದೆ. ನಮ್ಮ ಸರ್ಕಾರ ಬಂತು, ಹತೋಟಿಗಳನ್ನೆಲ್ಲಾ ತೆಗೆದು ಹಾಕಿದರು, ಜನಗಳಿಗೆ ಸೌಕರ್ಯ ಮಾಡಿಕೊಡುತ್ತಾ ಇದ್ದಾರೆ ಎಂದು ನಾವು ಸ್ವಲ್ಪ ಸುಮ್ಮನೆ ಇದ್ದೆವಲ್ಲಾ ಅದಕ್ಕೇ ಹೀಗಾಯಿತೋ ಏನೋ! ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ಮಾಡಿದ್ದಾರೆ.

ಅಧ್ಯಕ್ಷರು.—ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಈಗ ಮಾತನಾಡಿ.

ಶ್ರೀ ಶಿವನಂಜೇಗೌಡ.—ಆಗಲಿ ಸ್ವಾಮಿ. ನಾನು ಮೊದಲೇ ಹೇಳಿದಂತೆ ಮೈಸೂರು ದಕ್ಷಿಣ ತಾಲ್ಲೂಕಿನಲ್ಲಿ ಪೋಲೀಸ್ ಸ್ಟೇಷನ್ ಮೊದಲು ಎಲ್ಲಿತ್ತೋ ಅಲ್ಲೇ ಇರುವುದು ಒಳ್ಳೆಯದು, ಅಲ್ಲಿಗೆ ಪುನಃ ಬದಲಾವಣೆ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಮಾನ್ಯ ಅರ್ಥ ಸಚಿವರು 6 ಡಿಸ್ಟ್ರಿಕ್ಟು 4 ತಾಲ್ಲೂಕುಗಳಲ್ಲಿ ಪಾನನಿರೋಧ ಜಾರಿಯಲ್ಲಿದೆ ಎಂದು ಹೇಳಿದ್ದಾರೆ. ಈ ಪಾನನಿರೋಧ ಜಾರಿಯಲ್ಲಿರತಕ್ಕ ಜಿಲ್ಲೆಗಳಲ್ಲಿ ಯಾರುಯಾರು ಕಳ್ಳ ಭಟ್ಟಿ ಮತ್ತು ಕದ್ದು ಸಾಗಾಣಿಕೆ ಇಂಥ ಕೆಲಸಗಳನ್ನು ಮಾಡಿ ಹಣ ಸಂಪಾದನೆ ಮಾಡುತ್ತಾರೆಯೋ ಅಂಥವರನ್ನು ನೋಡಿಕೊಳ್ಳುವುದಕ್ಕೆ ಅಂಥವರ ಮೇಲೆ ಕೇಸು ಹಾಕುವುದಕ್ಕೆ ಸಾಕಾದಷ್ಟು ಸಿಬ್ಬಂದಿ ಇಲ್ಲದೆ ಪೋಲೀಸ್ ಇಲಾಖೆಯಲ್ಲಿ ಬಹಳ ತೊಂದರೆಯಾಗಿದೆ. ಎಲ್ಲಾದರೂ ಒಂದು ಕೇಸು ಪತ್ತೆ ಆಗಿ ಕಳ್ಳಭಟ್ಟಿ ಮಾಡುತ್ತಾ ಇದ್ದಾರೆ ಎಂದು ಹೇಳಿ ಸಮಾಚಾರ ಕಳುಹಿಸಿದರೆ, ಪೋಲೀಸ್ ಹೆಡ್‌ಕ್ವಾರ್ಟ್ಸ್‌ರು 40-50 ಮೈಲಿ ದೂರದಲ್ಲಿರುತ್ತದೆ, ಅವರು ಬಾಡಿಗೆಗೆ ಹೋಗುತ್ತಾ ಇರತಕ್ಕ ವ್ಯಾನ್‌ಅನ್ನೋ ಅಥವಾ ಇನ್ನಾರದಾದರೂ ಕಾರನ್ನೋ ದಾಕ್ಷಿಣ್ಯಕ್ಕೆ ತೆಗೆದುಕೊಳ್ಳಬೇಕು. ಆ ಬಾಡಿಗಾಗಿ ಅವರಿಗೆ ಹಣ ಕೊಡುವುದಿಲ್ಲ. ಆ ರೀತಿ ಕಾರನ್ನು ತೆಗೆದುಕೊಂಡು ಪೆಟ್ರೋಲ್ ಹಾಕಿಸಿಕೊಂಡು ಆ ಸ್ಥಳಕ್ಕೆ ಹೋಗುವುದರೊಳಗೆ ಈ ಕಳ್ಳಭಟ್ಟಿ ಮಾಡುತ್ತಾ ಇರತಕ್ಕವರಿಗೆ ಅವರ ಕಡೆಯವರು ಈ ರೀತಿ ಪೋಲೀಸ್‌ನವರು ಬರುತ್ತ ಇದ್ದಾರೆ ಎಂಬುದನ್ನು ತಿಳಿಸಿ ಅದು ಕಾಣದಂತೆ ಮಾಡತಕ್ಕ ಸನ್ನಿವೇಶ ಎಷ್ಟೋ ಇದೆ. ಹೀಗೆ ಮಲೆನಾಡಿನಲ್ಲಿ ಸಾಧಾರಣವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಕಷ್ಟ, ತೊಂದರೆ. ಮಲೆನಾಡಿನಲ್ಲಿ ಕಳ್ಳಭಟ್ಟಿ ತಯಾರು ಮಾಡುವುದು, ಮಾದಕ ಪದಾರ್ಥಗಳನ್ನು ಕದ್ದು ಸಾಗಿಸುವುದು ಇಂಥದನ್ನೆಲ್ಲಾ ನೋಡಿಕೊಳ್ಳಲಿಕ್ಕೆ ಸಾಕಾದಷ್ಟು ಸಿಬ್ಬಂದಿ ಇಲ್ಲ. ಯಾವುದಾದರೂ ಒಂದು ಕಾನೂನು ಸಾದರಾದರೆ ಆ ಕಾನೂನಿಗೆ ವ್ಯತಿರಿಕ್ತವಾಗಿ ನಡೆಯತಕ್ಕ ಜನಗಳು ನಮ್ಮ ದೇಶದಲ್ಲಿ ಹೆಚ್ಚಾಗಿದ್ದಾರೆ. ಯಾವುದಾದರೂ ಒಂದು ಕೇಸು ಇದೆ ಎಂದರೆ ಇವತ್ತು ಒಂದು ಷಿಕಾರಿ ಸಿಕ್ಕಿತು ಎಂದು ಪೋಲೀಸ್‌ನವರು ಹೋಗುತ್ತಾರೆ. ಜನಗಳೂ ಕೂಡ ಅಂಥ ಷಿಕಾರಿ ಸಿಕ್ಕರೆ ಸಾಕು ಮಧ್ಯಸ್ಥಿಕೆ ವಹಿಸಿ ಏನಾದರೂ ಲಪಟಾಯಿಸೋಣ ಎಂದು ಇರುತ್ತಾರೆ. ಹೀಗಾಗಿ ಪ್ರೊಹಿಬಿಷನ್ ಕೆಲಸ ಬಹಳ ಅತೃಪ್ತಿಕರವಾಗಿ ನಡೆಯುತ್ತಾ ಇದೆ. ಮೇಲಾಗಿ ಸಾಕಾದಷ್ಟು ಸಿಬ್ಬಂದಿ ಇಲ್ಲ. ಮಲೆನಾಡಿನಲ್ಲಿ ಪೋಲೀಸ್ ಸ್ಟೇಷನ್‌ಗಳು ಬಹಳ ವಿರಳವಾಗಿವೆ. 20-25 ಮೈಲಿಗೆ ಒಂದೊಂದು ಪೋಲೀಸ್ ಸ್ಟೇಷನ್ ಇರುತ್ತದೆ. ಆ ಪೋಲೀಸ್ ಸ್ಟೇಷನ್‌ನಲ್ಲಿರತಕ್ಕ ಸಬ್ ಇನ್‌ಸ್ಪೆಕ್ಟರು ಒಬ್ಬ ರಾಜನಂತೆ ಇರುತ್ತಾನೆ. ಆತನನ್ನು ಯಾರೂ ಮಾತನಾಡಿಸುವ ಹಾಗಿಲ್ಲ. ಜನಗಳ ಕಷ್ಟ ಏನು, ಅವರ ದೂರು ಏನಿದೆ, ಅವರ ಕಷ್ಟನಿವಾರಣೆ ಮಾಡುವುದಕ್ಕೆ ತಾನು ಎಷ್ಟರಮಟ್ಟಿಗೆ ಶಕ್ತ ಎನ್ನುವುದೂ ಕೂಡ ಅವರಲ್ಲಿರುವುದಿಲ್ಲ. ದೂರು ಕೊಟ್ಟ ಮೇಲೆ ಮಾಮೂಲು ಕೊಡಲೇ ಬೇಕಾಗುತ್ತದೆ. ಇಂಥ ಕೆಟ್ಟ ಕೆಲಸ ಆಯಿತು ಅಥವಾ ಹಸುವನ್ನು ಕದ್ದುಕೊಂಡು ಹೋಗಿದ್ದಾರೆ ಎಂದು ಯಾವನಾದರೂ ಪೋಲೀಸ್ ಸ್ಟೇಷನ್ನಿಗೆ ಹೋಗಿ ದೂರು ಕೊಟ್ಟ ಎಂದರೆ ಷುರು ಆಯಿತು ಎಂತಲೇ! ಕೇಸು ಮುಗಿಯುವವರೆಗೂ ಅವನನ್ನು ಬಿಡುವುದಿಲ್ಲ; ರೈತ ತನ್ನ ಮನೆಯಲ್ಲಿದ್ದ ಅಷ್ಟಿಷ್ಟು ಪದಾರ್ಥಗಳನ್ನೆಲ್ಲಾ ಮಾರಿ ಮನೆ ಹಾಳು ಮಾಡಿಕೊಳ್ಳಬೇಕು, ಅಲ್ಲಿಯವರೆಗೂ ಸತಾಯಿಸುತ್ತಾರೆ. ಹೀಗಾಗಿ ಮಲೆನಾಡಿನಲ್ಲಿರತಕ್ಕವರಿಗೆ ಬಹಳ ತೊಂದರೆ ಯಾಗಿದೆ. ಪೋಲೀಸ್ ಸಿಬ್ಬಂದಿ ಇದ್ದರೂ ಕೂಡ ಇಲ್ಲದಂತಾಗಿದೆ.

ಈ ಸಂದರ್ಭದಲ್ಲಿ ಪ್ರೊಹಿಬಿಷನ್‌ಗಾಗಿಯೇ ಬೇರೆ ಒಂದು ಸಿಬ್ಬಂದಿ ಏರ್ಪಾಡು ಮಾಡುವುದು ಬಹಳ ಸೂಕ್ತ ಮತ್ತು ಅವರ ಸಂಚಾರಕ್ಕೆ ವ್ಯಾನ್ ಅಥವಾ ಜೀಪುಗಳನ್ನು ಕೊಡಬೇಕಾದದ್ದು ಬಹಳ ಅಗತ್ಯ ಎಂದು ಹೇಳುತ್ತೇನೆ. ಈಗ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಿಗೆ ಒಂದು ಜೀಪು ಇದೆ. ಬಾಕಿ ಇನ್ನಾವ ಕೆಲಸಕ್ಕೂ ಆ ಜೀಪಿನ ಸೌಕರ್ಯ ಸಿಕ್ಕುವುದಿಲ್ಲ. ಅವರು ನಾನಾ ಕೆಲಸಗಳಿಗಾಗಿ ಅದರಲ್ಲಿ ಹೋಗುತ್ತಾ ಇರಬೇಕಾಗುತ್ತದೆ. ಈ ಜೀಪುಗಳನ್ನು ಕೊಡುವಾಗಲೂ ಸಹ ಸರಿಯಾದ ಜೀಪುಗಳನ್ನು ಕೊಟ್ಟಿಲ್ಲ. ಹಾಸನದಲ್ಲಿರುವ ಜೀಪು ಕೆಟ್ಟುಹೋಗಿ ಬೇರೆಕಡೆಯಿಂದ ತರಿಸಿಕೊಳ್ಳಬೇಕಾಯಿತು. ಆದ್ದರಿಂದ ಈ ವಿಷಯದಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು. ಈ ಜೀಪುಗಳ ರಿಪೇರಿಗೆ ಸ್ಪೇರ್ ಪಾರ್ಟ್ಸ್ ಬೇಕಾದರೆ ಎಸ್. ಪಿ. ಸಿ.ಗೆ ಬರೆಯಬೇಕು. ಬರೆದು ಅಲ್ಲಿಂದ ಮಂಜೂರಾಗಿ ಬರುವವರೆಗೂ ಏನೂ ಮಾಡುವ ಹಾಗಿಲ್ಲ. ಹೀಗೆ ಅನಿವಾರ್ಯಗಳು ಬೇಕಾದಷ್ಟಿವೆ. ಈ ಅನಿವಾರ್ಯಗಳನ್ನು ತಡೆಗಟ್ಟಿ ಈ ವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಶ್ರದ್ಧೆವಹಿಸಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುವಂತೆ ಪ್ರೊಹಿಬಿಷನ್ ಸಿಬ್ಬಂದಿಗೆ ಒಂದೊಂದು ಜೀಪನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೇಲಾಗಿ ಅಲ್ಲಿಗೆ ಜನಗಳನ್ನು

ಹಾಕುವಾಗ ಸರಿಯಾಗಿ ಯೋಚನೆ ಮಾಡಿ ಯಾರು ನಿಸ್ಪೃಹತೆಯಿಂದ ಕೆಲಸ ಮಾಡುತ್ತಾರೋ ಅಂಥವರನ್ನು ಹಾಕಬೇಕು. ಸಾಧಾರಣವಾಗಿ ಪೋಲೀಸ್ ಇಲಾಖೆಯಲ್ಲಿ 100 ಜನ ಇದ್ದರೆ 95 ಜನಕ್ಕೆ ಕಡಿಮೆ ಇಲ್ಲದಂತೆ ಎಲ್ಲರೂ ಕುಡಿಯುತ್ತಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಅಧ್ಯಕ್ಷರು.—ತಾವು ಹೇಳುವ ಉಪಾಯವೇನು ?

ಶ್ರೀ ಬಿ. ಎನ್. ಬೋರಣ್ಣಗೌಡ.—ಅದನ್ನು ಆ ಇಲಾಖೆಯವರಿಗೇ ಬಿಟ್ಟಿದ್ದೇನೆ. ಇದಕ್ಕಾಗಿ ಒಂದು ಬೇರೆ ಕಮಿಟಿ ಮಾಡಿ ಅದಕ್ಕೆ ಇದನ್ನು ವಹಿಸಿ ಎಂದರೆ ಅವರು ತಯಾರಾಗಿಲ್ಲ. Remedy ಏನು ಎಂಬುದನ್ನು ಹೇಳುತ್ತೇನೆ. ಆದರೂ ಅವರೇ ಯೋಚನೆ ಮಾಡಬೇಕು. 100ಕ್ಕೆ 95 ಮಂದಿ ಕುಡಿಯುತ್ತಾರೆ ಎಂದ ಮೇಲೆ, ಕುಡಿಯುವವರನ್ನು ಹಿಡಿಯುವುದಕ್ಕೆ ಅವರನ್ನು ಹಾಕುವುದರಿಂದ ಏನು ಪ್ರಯೋಜನ ಎಂಬುದನ್ನು ತಮ್ಮ ಮುಂದೆ ಇವತ್ತು ಹೇಳಬೇಕಾಗಿದೆ. ವಿಚಿತ್ರವಾದ ಒಂದು ಕೇಸು. ಒಬ್ಬರು ಒಂದು ಬ್ರಾಂದಿ ಸೀಸೆ ತೆಗೆದುಕೊಂಡು ಹೋಗುತ್ತಾ ಇದ್ದರು. ಪ್ರೊಹಿಬಿಷನ್ ಚೆಕ್‌ಗೇಟು ಎಂದು ಗೊತ್ತಾದ ಕೂಡಲೇ ಅವುಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಂಡು ಬಂದು, ಅಲ್ಲಿದ್ದ ಪೋಲೀಸ್‌ನವರಿಗೆ ಕೆಲವು ಬ್ರಾಂದಿ ಬಾಟಲ್‌ಗಳನ್ನು ಕೊಟ್ಟರು. ಹಾಗೆ ಕೊಟ್ಟಮೇಲೆ ಅವರೇ ಸಾವಿರಗಟ್ಟಲೆ ಸೀಸೆಗಳನ್ನು ತೆಗೆದುಕೊಂಡು ಹೋದರು. ಹೀಗೆ ಪೋಲೀಸ್‌ನವರೇ ಸೇರಿಕೊಂಡು ಪೆಟ್ಟಿಗೆ ಪೆಟ್ಟಿಗೆ ಬ್ರಾಂದಿಬಾಟಲ್‌ಗಳನ್ನು ತುಂಬಿ ಸಾಗಿಸಿಕೊಂಡು ಹೋದರೆ ಅಂಥವರ ಮೇಲೆ ಯಾವ ಕೇಸೂ ಇಲ್ಲ. ಅದೇ ಯಾವನೋ ಒಬ್ಬ ಅಕಸ್ಮಾತ್ತಾಗಿ ಸಿಕ್ಕಿಬಿದ್ದರೆ ಅಂಥವನನ್ನು ಹಿಡಿದುಕೊಂಡುಹೋಗಿ 50 ರೂಪಾಯಿ ಜುಲ್ಮಾನೆ ಹಾಕುತ್ತಾರೆ. ಈ ರೀತಿ ಅನೀತಿಯುತವಾಗಿ ವರ್ತಿಸುತ್ತಿರುವುದನ್ನು ಅನೇಕ ಸಾರಿ ಹೇಳಿದ್ದೇನೆ. ಬೆಂಗಳೂರಿನಿಂದ ಪೆಟ್ಟಿಗೆಗಳು ಕೋಕೋ ಎಂದು ಹೇಳಿ ಸೀಲ್ ಆಗಿಬರುತ್ತವೆ. ಒಳಗೆ ಇರುವುದು ಬ್ರಾಂದಿ ಬಾಟ್ಲು. ಇದನ್ನು ತರಿಸುವವರು ಯಾರು? ದೊಡ್ಡ ದೊಡ್ಡ ಸಾಹುಕಾರರು, ಬ್ರಾಂದಿ ಉಪಯೋಗಿಸದೇ ಇರತಕ್ಕ ಬ್ರಾಹ್ಮಣರು, ಲಿಂಗಾಯಿತರು, ಒಳ್ಳೊಳ್ಳೆಯ ಶ್ರೀಮಂತರು, ಪ್ಲಾಂಟರುಗಳು ಆಗಿದ್ದಾರೆ. ಎಷ್ಟೋ ಸಾರಿ ಇಂಥ ಕಡೆ, ಇಂಥ ಕಡೆ ಸೋಪಿನ ಪೆಟ್ಟಿಗೆ ಎಂದು ಸೀಲ್ ಆಗಿ ಬ್ರಾಂದಿ ಬಾಟಲ್ ಹೋಗುತ್ತಾ ಇದೆ, ಚೆಕ್ ಮಾಡಿ ಎಂದು ಪೋಲೀಸ್ ಸೂಪರಿಂಟೆಂಡೆಂಟರಿಗೆ ಹೇಳಿದ್ದೇನೆ. ಅಂಥ ಸಂದರ್ಭದಲ್ಲಿ ಏನುಮಾಡುತ್ತಾರೆ ಎಂದರೆ—ಹಿಂದೆ ಒಬ್ಬರು ಇದ್ದರು, ಈಗ ಆ ರೀತಿ ನಡೆಯುತ್ತಾ ಇಲ್ಲ, ಈಗಿರುವವರು ಒಳ್ಳೆಯವರು—ಅವರು ಏನು ಮಾಡುತ್ತಿದ್ದರು ಎಂದರೆ ತಾವೇ ಬ್ರಾಂದಿ ಕುಡಿದು, ಆ ಬಾಟ್ಲುಗಳನ್ನೆಲ್ಲಾ ತಮ್ಮ ವ್ಯಾನ್‌ನಲ್ಲಿಟ್ಟುಕೊಂಡು ಮನೆಗೆ ಸಾಗಿಸಿಕೊಂಡು ಬರುತ್ತಿದ್ದರು. ಈ ದಿನ ಪಾನನಿರೋಧ ಜಾರಿ ಮಾಡಿರುವ ಕಡೆ ಎಲ್ಲೆಲ್ಲಿ ಇಂಥ ಪರಿಸ್ಥಿತಿ ಇದೆ, ಯಾವ ಯಾವ ರೀತಿಯಲ್ಲಿ ಸಾಗಿಸುತ್ತಾ ಇದ್ದಾರೆ ಎಂಬುದನ್ನು ಕಂಡುಹಿಡಿದು ಅಂಥವರ ಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಈ ಡಿಪಾರ್ಟ್‌ಮೆಂಟು ಇದ್ದರೆ ಎಷ್ಟು ಪ್ರಯೋಜನವೋ ಇಲ್ಲದೇ ಇದ್ದರೂ ಅಷ್ಟೇ. ಎಲ್ಲಾ ಕಡೆಯೂ ಪ್ರೊಹಿಬಿಷನ್ ಸ್ಟ್ಯಾಫ್ ಇದೆ, ಸ್ಟ್ಯಾಫ್ ಸಾಲದು ಎಂದು ಹೇಳುವುದರ ಜೊತೆಗೆ ಅವರೇ ಇಂಥ ಕೆಲಸಮಾಡುವವರಿಗೆ ನೆರವಾಗಿ ಸರಿಯಾದ ನಿಗಾ ಕೊಡದಿದ್ದರೆ ಈ ಪಾನನಿರೋಧ ಈಗ ಅರ್ಧಾಂತತವಾಗಿರುವುದು ಕೊನೆಗೆ ಪೂರ್ಣವಾಗಿ ಜಾರಿಯಲ್ಲಿ ಇಲ್ಲವೇ ಇಲ್ಲವೇನೋ ಎನ್ನುವ ಪರಿಸ್ಥಿತಿಗೆ ಬರುವುದರಲ್ಲಿ ಆಶ್ಚರ್ಯ

2 P.M.

ವೇನೂ ಇಲ್ಲ. ಅಂಥ ಕಡೆ prohibition ಗೋಸ್ಕರ ಕೇಸುಗಳನ್ನು ಅವರ ಮೇಲೆ ಹಾಕುವುದಕ್ಕೆ ಅವಕಾಶವಿದೆ. Prohibition cases ಹಿಡಿದು ಬೇಕಾದಷ್ಟು 10-20 ಡ್ರಾಂ ಅಲ್ಲ, ಹಂಡೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಮಾಡುವವರನ್ನು ಹಿಡಿದುಕೊಂಡು ಬಂದರೆ ಕೋರ್ಟ್‌ನಲ್ಲಿ 50 ರೂಪಾಯಿ ಜುಲ್ಮಾನೆ ಹಾಕುತ್ತಾರೆ. 50 ರೂಪಾಯಿ ಜುಲ್ಮಾನೆ ಎಂದು ಹೇಳಿದ ತಕ್ಷಣ ಸೊಂಟದಿಂದ ನೋಟುಗಳನ್ನು ತೆಗೆದು 50 ರೂಪಾಯಿಯಲ್ಲದೆ ಇದ್ದರೆ 60 ರೂಪಾಯಿ ತೆಗೆದುಕೊಳ್ಳಿ ಎಂದು ಮ್ಯಾಜಿಸ್ಟ್ರೇಟರ ಮುಖಕ್ಕೆ ಚೆಲ್ಲಿ ಹೊರಟುಹೋಗುತ್ತಾರೆ. ಸಂಜೆಯ ವೇಳೆಗೆ 50 ರೂಪಾಯಿಗಳಲ್ಲ ಅದರ ಹತ್ತರಷ್ಟು ಸಂಪಾದನೆ ಮಾಡುತ್ತಾರೆ. ಹೀಗೆ ಅನೀತಿಯಲ್ಲಿ ಸಂಪಾದನೆ ಮಾಡತಕ್ಕವರು ಹೆಚ್ಚಾಗಿದ್ದಾರೆ. ಈ ರೀತಿಯಾಗಿ ಸಂಪಾದನೆ ಮಾಡುತ್ತಿದ್ದಾರೆಂದು ಪ್ರತಿ ದಿವಸ, ಪ್ರತಿ ಘಂಟೆ ಪೋಲೀಸಿನವರಿಗೆ ತಿಳಿಸುತ್ತಿದ್ದೇವೆ ಮತ್ತು ಸ್ಥಳಗಳನ್ನು ಕೂಡ ಹೇಳುತ್ತೇವೆ. ಆದರೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದಕ್ಕಾಗಿ ಇಲಾಖೆಯಲ್ಲಿ ಸರಿಯಾದ ಬಂದೋಬಸ್ತು ಮಾಡಬೇಕು ಎಂದು ಸವಿನಯ ಪ್ರಾರ್ಥನೆ ಸಲ್ಲಿಸುತ್ತಿದ್ದೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಸಾಧಾರಣವಾಗಿ ಮಾನ್ಯ ಮಂತ್ರಿಗಳು ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಆದರೆ ಪೋಲೀಸು ಇಲಾಖೆಯಲ್ಲಿ ಅಷ್ಟು ದಕ್ಷತೆ ಇದೆಯೋ ಎಂದು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಾಧಾರಣವಾಗಿ ಗ್ರಾಮಾಂತರಗಳ ವಿಚಾರ ತೆಗೆದುಕೊಳ್ಳೋಣ. ಸರ್ಕಾರದವರು ಸುಮಾರು ಆರೇಳು ವರ್ಷಗಳ ಕೆಳಗೆ ಮಸೂದೆಗಳನ್ನು ಪಾಸ್ ಮಾಡಿಸಿ ಅವನ್ನು ಪ್ರತಿಯೊಂದು ಇಲಾಖೆಗೂ ಕೂಡ ಕಳುಹಿಸಿದ್ದಾರೆ. ಒಂದು ಉದಾಹರಣೆ ಕೊಡುತ್ತೇನೆ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಗ್ರಾಮಗಳಲ್ಲಿ ದೇವೀ ಜಾತ್ರೆಗಳನ್ನು ಮಾಡಲು ಲೈಸೆನ್ಸ್ ತೆಗೆದುಕೊಳ್ಳುತ್ತಿದ್ದರು. ಈಚೆಗೆ ದೇವೀಜಾತ್ರೆಗಳಲ್ಲಿ ಕುರಿ, ಕೋಣ ಕಡಿಯಬಾರದು ಎಂದು ಕಾನೂನು ಇದ್ದರೂ ಸಹ ಪೋಲೀಸಿನವರೇ ಕಾವಲು ನಿಂತುಕೊಂಡು ಗ್ರಾಮಗಳಲ್ಲಿ ಕುರಿ, ಕೋಣ ಕಡಿಸುತ್ತಾರೆ. ಇದನ್ನೆಲ್ಲ ನಾವು ಪೋಲೀಸು ಸೂಪರಿಂಟೆಂಡೆಂಟರ ಗಮನಕ್ಕೆ ತಂದಿದ್ದೇವೆ. ಆದರೆ ಅವರು ಏನೂ ಕ್ರಮ ತೆಗೆದುಕೊಂಡಿಲ್ಲ. ದೇವರ ಗುಡಿ ಮುಂದೆ ಕಡಿಸುವುದಕ್ಕೆ ಇಷ್ಟೆಲ್ಲ ಹೇಳುತ್ತಿದ್ದೇನೆ. ಮನೆಗಳಲ್ಲಿ ಕಡಿಯುವುದಕ್ಕೆ ಏನೂ ಹೇಳುವುದಕ್ಕಾಗುವುದಿಲ್ಲ. ಆದರೆ ಇದನ್ನೆಲ್ಲ ನೋಡಿದರೆ ತುಂಬ ವ್ಯಸನವಾಗುತ್ತದೆ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ದೇವೀ ಜಾತ್ರೆಗಳು ಬಹಳ ಬಿಕ್ಕಟ್ಟಿನಿಂದ ನಡೆಯುತ್ತಿದ್ದುವು. ದೇವೀಜಾತ್ರೆಗಳನ್ನು ಮಾಡುವುದಕ್ಕೆ ಬಹಳ ಹೆದರುತ್ತಿದ್ದರು. ಆದರೆ ಇವೊತ್ತಿನ ದಿವಸ ಯಾವ ಗ್ರಾಮದಲ್ಲಿ ಹೋಗಿ ನೋಡಿದರೂ ಕೂಡ ದೇವಿ ಜಾತ್ರೆಗಳು ಸಂಭ್ರಮದಿಂದ ನಡೆಯುತ್ತಿವೆ. ಪೋಲೀಸಿನವರು ಆ ಗ್ರಾಮಗಳಿಗೆ ಹೋಗಿ ಕಳ್ಳಭಟ್ಟಿಸಾರಾಯಿ ತರಿಸಿಕೊಂಡು ಕುಡಿದು ಜಾತ್ರೆಯನ್ನು ಮಾಡಿಸಿ ವಾಪಸು ಬರುತ್ತಾರೆ. ಆದುದರಿಂದ ಸರ್ಕಾರದವರು ನಿದಾಕ್ಷಿಣ್ಯವಾಗಿ ಕ್ರಮತೆಗೆದುಕೊಳ್ಳಬೇಕು. ಪೋಲೀಸ್

(ಶ್ರೀ ಟಿ. ಹನುಮಯ್ಯ)

ಇಲಾಖೆ ಜನರಿಗೆ ತಂದೆ ತಾಯಿಗಳಹಾಗೆ. ಇವರು ಜನರ ಹಿತರಕ್ಷಣೆಯನ್ನು ನೋಡಿಕೊಳ್ಳಬೇಕು. ಇವರು ಪ್ರಜೆಗಳನ್ನು ಸರಿಯಾಗಿ ರಕ್ಷಣೆ ಮಾಡುವುದಿಲ್ಲವೆಂದರೆ ತಂದೆತಾಯಿಗಳೇ ಮಕ್ಕಳನ್ನು ಕೊಂದುಹಾಕಿದಹಾಗಾಗುತ್ತದೆ. ಹೀಗೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಇಷ್ಟೇ ಅಲ್ಲದೆ ಅನೇಕ ಕಡೆ ಪಾನನಿರೋಧ ಯಶಸ್ವಿಯಾಗಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಇದಕ್ಕೆಲ್ಲ ಮುಖ್ಯವಾಗಿ ಪೋಲೀಸಿನವರೇ ಕಾರಣಕರ್ತರು ಎಂದು ಹೇಳಿಕೊಳ್ಳುತ್ತಿದ್ದಾರೆ. ಏಕೆಂದರೆ ಪೋಲೀಸಿನವರು ವಾರಕ್ಕಿಷ್ಟು, ಹದಿನೈದು ದಿವಸಗಳಿಷ್ಟು ಎಂದು ಕೆಲವು ಮಾಮೂಲುಗಳನ್ನು ಮಾಡಿಕೊಂಡಿದ್ದಾರೆ. ಇದನ್ನು ಎಲ್ಲರೂ ಹಂಚಿಕೊಂಡು ಕಳ್ಳಭಟ್ಟಿ ಸಾರಾಯಿ ಮಾಡಿಸುತ್ತಿದ್ದಾರೆ. ಪೋಲೀಸ್ ಇಲಾಖೆಗೆ ಈ ಕೆಲಸವನ್ನು ತಪ್ಪಿಸಿ ಸೇವಾದಳದವರಿಗೆ ಅಧಿಕಾರವನ್ನು ಕೊಡಿ. ಕಳ್ಳಭಟ್ಟಿ ಸಾರಾಯಿ ತಯಾರಿಸುವವರನ್ನು ಹಿಡಿಯುವುದಕ್ಕೆ, ಒಂದು ತಿಂಗಳೊಳಗಾಗಿ ಪೋಲೀಸು ಇಲಾಖೆಗಿಂತಲೂ ಯಶಸ್ವಿಯಾಗಿ ಕೆಲಸ ಮಾಡಿದರೆ ಒಪ್ಪಿಕೊಳ್ಳಿ. ಇಲ್ಲದೆ ಇದ್ದರೆ ಬೇಡ. ನಾನು ಇಷ್ಟು ಏಕೆ ಹೇಳುತ್ತಿದ್ದೇನೆಂದರೆ ಪೋಲೀಸಿನವರು ಇವೊತ್ತು ನಿಜವಾಗಿಯೂ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಮುಖ್ಯವಾಗಿ ಇದರಿಂದ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಜಾಸ್ತಿಯಾಗಿದೆ. ಎಲ್ಲೆಲ್ಲೂ ಇದರ ತಯಾರಿಕೆ ಹೆಚ್ಚಾಗಿದೆ. ಜನಗಳೂ ಹೆಚ್ಚಾಗಿ ಕುಡಿಯುತ್ತಿದ್ದಾರೆ. ಕೇಸುಗಳನ್ನೂ ಹಾಕುತ್ತಾರೆ. ಆದರೆ ಏನು ಫಲ? ಸರಿಯಾದ ಒಂದು ಕೇಸನ್ನೂ ಹಿಡಿಯುವುದಿಲ್ಲ. ಸರ್ಕಾರದವರು ಪ್ರತಿ ತಿಂಗಳೂ ಇಷ್ಟಿಷ್ಟು ಕೇಸುಗಳನ್ನು ಹಾಕಬೇಕೆಂದು ಹೇಳಿರುತ್ತಾರೆ. ನಿಜವಾಗಿ ತಯಾರು ಮಾಡುವವರನ್ನು ಹಿಡಿಯುವುದೇ ಇಲ್ಲ. ಯಾರೋ ಒಬ್ಬ innocent ಆಗಿರುವವನ ಮನೆಯಬಳಿ ಕಳ್ಳಭಟ್ಟಿ ಸಾರಾಯಿ ತಯಾರಿಸುವ ಪದಾರ್ಥ, ಪಾತ್ರೆ ವಗೈರೆ ರಾತ್ರಿವೇಳೆ ಕಳ್ಳತನದಲ್ಲಿ ತಂದಿಟ್ಟು, ಬೆಳಗಾಗುವ ವೇಳೆಗೆ ಅವನನ್ನು ಪೋಲೀಸಿನವರು ಹಿಡಿದುಕೊಂಡು ಹೋಗುತ್ತಾರೆ. ಅವನ ಮೇಲೆ ಕೇಸು ಹಾಕುತ್ತಾರೆ. ಈ ರೀತಿಯಾಗಿ ನಡೆಯುತ್ತಿದೆ. ಮುಖ್ಯವಾಗಿ ಪೋಲೀಸಿನವರ ದಕ್ಷತೆ ಕಡಿಮೆಯಾಗಿರುವುದರಿಂದ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಹೆಚ್ಚಾಗಿದೆ ಎಂದು ಹೇಳಬಹುದೇ ವಿನಾ ದಕ್ಷತೆ ಇದ್ದರೆ ಹೆಚ್ಚಾಗುವುದಕ್ಕೆ ಕಾರಣವಿಲ್ಲವೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ.

ಸಾಧಾರಣವಾಗಿ ಹಿಂದೆ ಅನ್ಯದೇಶೀಯರು ಬಂದರೆ, ವೈಸ್‌ರಾಯ್‌ಗಳು ಬಂದರೆ ಕಂಭಕ್ಕೆ ಒಬ್ಬೊಬ್ಬರಂತೆ ಪೋಲೀಸು ಕಾನ್‌ಸ್ಟೇಬಲುಗಳನ್ನು ನಿಲ್ಲಿಸುತ್ತಿದ್ದರು. ಈಗಲೂ ಕೂಡ ಅದೇ ರೀತಿ ಮಾಡಿದರೂ ಸಹ ನಮ್ಮ ಅಭ್ಯಂತರವಿಲ್ಲ. ಆದರೆ ಈ ಕಳ್ಳಭಟ್ಟಿ ಸಾರಾಯಿ ತಯಾರಿಕೆಯು ನಿಲ್ಲಬೇಕು.

ಮುಖ್ಯವಾಗಿ ಪೋಲೀಸು ಇಲಾಖೆಯಲ್ಲಿ ದಕ್ಷತೆ ಕಡಿಮೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೇಳಿದರೆ ನಮ್ಮ ನಮ್ಮ ಕೆಲಸ ಸರಿಯಾಗಿ ಮಾಡುತ್ತೇವೆ; ನೀವು ಬಂದು ಏಕೆ ಹೇಳಬೇಕು ಎನ್ನುತ್ತಾರೆ. ಪ್ರಜೆಗಳಲ್ಲಿ ಅನ್ಯಾಯ ನಡೆಯುತ್ತಿದೆ ಎಂದು ಅಧಿಕಾರಿಗಳಿಗೆ ಹೋಗಿ ತಿಳಿಸಿದರೆ ಅವರು ಕಿವಿಯಲ್ಲಿ ಹಾಕಿಕೊಳ್ಳುವುದಿಲ್ಲ. ಈ ತರಹ ದಕ್ಷತೆ ಕಡಿಮೆಯಾಗುತ್ತಿರುವುದನ್ನು ತಾವು ಪರಿಶೀಲನೆ ಮಾಡಬೇಕು. ಖಂಡಿತವಾಗಿಯೂ ಕೂಡ ಅನೇಕ ಕಡೆ ಕಳ್ಳತನ ಮತ್ತು ದರೋಡೆಗಳು ಹೆಚ್ಚಾಗುತ್ತಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒಬ್ಬ ಪೋಲೀಸು ಕಾನ್‌ಸ್ಟೇಬಲ್ ತನ್ನ ಹೆಂಡತಿಯನ್ನು ಹೊಡೆದುದರ ಪರಿಣಾಮವಾಗಿ ಆಕೆಯನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಕೇಳುವವರೇ ದಿಕ್ಕಿಲ್ಲದಹಾಗಾಗಿದೆ. ಆದುದರಿಂದ ಏತಕ್ಕೋಸ್ಕರವಾಗಿ ದಕ್ಷತೆ ಹೀನವಾಗಿದೆ, ಕಡಿಮೆಯಾಗಿದೆ ಎನ್ನುವುದನ್ನು ತಾವು ಚೆನ್ನಾಗಿ ಪರಿಶೀಲನೆ ಮಾಡಬೇಕು. ದೇಶದ ರಕ್ಷಣೆಗೋಸ್ಕರ ಪೋಲೀಸ್ ಇಲಾಖೆ ಇರುವುದರಿಂದ ಹೆಚ್ಚಿನ ಮೆಹನತ್ತಿನಿಂದ ಕೆಲಸ ಮಾಡಲು ತರದೂದು ಮಾಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಡಿಮ್ಯಾಂಡನ್ನು ವಿರೋಧಿಸಿ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಹೇಳಬೇಕಾದ ಅನೇಕ ವಿಷಯಗಳನ್ನು ಶ್ರೀ ಶ್ರೀನಿವಾಸ ಐಯ್ಯಂಗಾರ್ಯರವರು ಹೇಳಿದ್ದಾರೆ. ಒಂದು ವಿಚಾರವೇನೆಂದರೆ ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಇಲ್ಲ, ಇದನ್ನು ಉತ್ತಮಪಡಿಸಬೇಕು ಎನ್ನುವುದು ವರ್ಷೇ ವರ್ಷೇ ನಾವು ಹೇಳತಕ್ಕ ಅಂಶ. ನನ್ನ ಮಾನ್ಯ ಸ್ನೇಹಿತರು ಈ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ವ್ಯವಸ್ಥೆ ಇಲ್ಲವೆನ್ನುವುದನ್ನೂ ದಿವಸ ದಿವಸಕ್ಕೆ ದಕ್ಷತೆ ಕಡಿಮೆಯಾಗುತ್ತಿದೆ ಎನ್ನುವುದನ್ನೂ ಹೇಳಿದ್ದಾರೆ. ನಾನಾದರೂ ಒಂದು ವಿಚಾರ ಹೇಳುತ್ತೇನೆ. ದಕ್ಷತೆ ಕಡಿಮೆಯಾಗದೆ ಇರುವುದಕ್ಕೆ ಸಂಬಳ ಸಾರಿಗೆಗಳನ್ನು ಹೆಚ್ಚಾಗಿ ಕೊಡಬೇಕು ಮತ್ತು ನೌಕರ ವರ್ಗದವರನ್ನೂ ಹೆಚ್ಚು ಮಾಡಬೇಕು ಎನ್ನುವುದು ಸಾಮಾನ್ಯವಾಗಿ ಹೇಳತಕ್ಕ ಅಂಶ. ಅದೇನಾದರೂ ಕಡಿಮೆಯಾಗಿದೆಯೇ ಎಂದರೆ, ಕಳೆದ ಹತ್ತು ವರ್ಷಗಳಲ್ಲಿ 100ಕ್ಕೆ 540ರಷ್ಟು ಹೆಚ್ಚಾಗಿ ಈ ಇಲಾಖೆಗೆ ಖರ್ಚಾಗುತ್ತಿದೆ ಎಂದು ಹೇಳಬಹುದು. 1946-47 ರಲ್ಲಿ 24 ಲಕ್ಷ ರೂಪಾಯಿ ಖರ್ಚಾಗುತ್ತಿದ್ದುದು ಈ ವರ್ಷ 127 ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಇಷ್ಟು ಹೆಚ್ಚಾಗಿ ಕೊಟ್ಟಮೇಲೆ ಹಣವನ್ನು ಕೊಡುತ್ತಿಲ್ಲವೆಂದು ಹೇಳುವುದಕ್ಕೆ ಮಾತ್ರ ಖಂಡಿತವಾಗಿಯೂ ಕಾರಣವಿಲ್ಲ. ಈ ಹಣ ಯಾವ ರೀತಿ ವಿನಿಯೋಗವಾಗಿದೆ ಎಂದು ತಿಳಿಸುತ್ತೇನೆ. ಈ ಇಲಾಖೆಯಲ್ಲಿ ಕಡಿಮೆ ದರ್ಜೆಯ ಜನರು ಬಹಳ ಮಂದಿ ಇದ್ದಾರೆ. 9,837 ಜನ ಕಾನ್‌ಸ್ಟೇಬಲುಗಳೂ ಮತ್ತು 1,200 ಜನ ದಫೇದಾರರೂ ಮತ್ತು ಜಮೇದಾರರೂ ಇದ್ದಾರೆ. ಇಷ್ಟು ಜನರಿಗೂ ಬಹಳ ಕಡಿಮೆ ಸ್ಕೇಲು ಸಂಬಳ ಸಿಗುತ್ತದೆ. ಅವರಿಗೆ ಜೀವನಕ್ಕೆ—ಒಂದು ಸಂಸಾರಕ್ಕೆ ಬೇಕಾಗಿಲ್ಲ—ಒಬ್ಬನ ಮಟ್ಟಿಗಾದರೂ ಆಗುವ ಹಾಗೆ ಇದೆಯೇ ಎಂದರೆ ಖಂಡಿತ ಇಲ್ಲವೆನ್ನಬಹುದು. ಅವನೇನಾದರೂ ಹೊಟ್ಟೆ ಬಟ್ಟೆಗೆ ಸರಿಯಾಗಿ ನೋಡಿಕೊಳ್ಳಬೇಕಾಗಿದ್ದರೆ ಸಂಬಳ ಸಾಲದೆ ಹೊರಗಡೆ ಸಂಪಾದನೆ ಮಾಡಿಕೊಳ್ಳಬೇಕು. ಹಾಗೇನಾದರೂ ಹೊರಗಡೆ ಸಂಪಾದನೆಗೆ ಹೊರಟರೆ ಕೆಳಗಿನಿಂದ ಮೇಲಿನವರೆಗೂ ಕೂಡ ಅವರವರ ಸಂಬಳದ ದಾಮಾಷಾ ಪ್ರಕಾರ ಹೋಗಬೇಕಾಗುತ್ತದೆ. ಒಬ್ಬನೇನಾದರೂ ಅನೀತಿಗೆ ಇಳಿದನೆಂದರೆ ಎಲ್ಲರೂ ಅನೀತಿಗೆ ಇಳಿಯುವುದಕ್ಕೆ ಸಾಧ್ಯವಿದೆ. ಈ ರೀತಿಯ ಸಂಪಾದನೆಯನ್ನು ತಪ್ಪಿಸಬೇಕು. ಹಾಗೆ ತಪ್ಪಿಸಲು ಆಗದೆ ಇದ್ದರೆ ತಾವೂ ಕೂಡ ಅದರಲ್ಲಿ ತೆಗೆದುಕೊಳ್ಳಬೇಕು. ಈ ಅಂಶಗಳನ್ನು ಎಷ್ಟೋ ವರ್ಷಗಳಿಂದ ಒತ್ತಿ ಒತ್ತಿ ಹೇಳುತ್ತಿದ್ದೇವೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಸಂಬಳ 22-32 ಎಂದು ನಿಗದಿಯಾಗಿದೆ. ಇದೇ ಅತ್ಯಂತ ಹೆಚ್ಚಿನ ರಿಯಾಯಿತಿ ಎಂದು ನಮ್ಮ ಸರ್ಕಾರದವರು ಹೇಳಿಕೊಳ್ಳುವುದು. 22 ರೂಪಾಯಿ

ಸಂಬಳದಲ್ಲಿ ಯಾವ ರೀತಿ ಒಬ್ಬ ಮನುಷ್ಯ ಜೀವನ ಮಾಡಬೇಕು ಎನ್ನುವುದನ್ನು ಯೋಚನೆಮಾಡಬೇಕು. ಕೈಗಾರಿಕಾಬಾಬಿನಲ್ಲಿ ಒಬ್ಬ ಕೂಲಿಯುವನಿಗೆ ಏನು ಸಂಬಳ ಕೊಡಬೇಕು ಎಂದು ನಿಷ್ಪರ್ಷೆ ಮಾಡಿದ್ದೀರೋ, ಇನ್ನೂ ಆರ್ಗನೈಜ್ ಆಗದೆ ಇದ್ದರೂ ಕೂಡ ವ್ಯವಸಾಯದ ಬಾಬಿನಲ್ಲಿ ಒಬ್ಬ ಕೂಲಿಗಾರನಿಗೆ ಏನು ಕೊಡಬೇಕು ಎಂದು ಮಾಡಿದ್ದೀರೋ ಅದಕ್ಕಿಂತಲೂ ಇವರಿಗೆ ಕೊಡತಕ್ಕ ಸಂಬಳ ಬಹಳ ಕಡಿಮೆ. ಮುಖ್ಯವಾಗಿ ಪ್ರಜೆಗಳ ಮಾನ, ಪ್ರಾಣ ಮತ್ತು ಅವರ ಆಸ್ತಿ ಎಲ್ಲವನ್ನೂ ಸಂರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ಮತ್ತು 24 ಘಂಟೆಯೂ ಕೂಡ ಕೆಲಸಕ್ಕೆ ಸಿದ್ಧರಾಗಿರತಕ್ಕ ಜವಾಬ್ದಾರಿಯನ್ನು, ಕೇವಲ 22 ರೂಪಾಯಿ ಸಂಬಳ ಕೊಟ್ಟು, ಪೋಲೀಸಿನವರಿಗೆ ವಹಿಸುವುದು ಸರಿಯಾದದ್ದೆ? ನಾನು ಹೇಳಿದಂತೆ ಒಂದಕ್ಕೆ ಐದರಷ್ಟು ಖರ್ಚು ಹೆಚ್ಚಾಗಿದ್ದರೂ ಕೂಡ ಎಷ್ಟರಮಟ್ಟಿಗೆ ಜನಗಳಿಗೆ ನೀವು ಅನುಕೂಲ ಮಾಡಿದ್ದೀರಿ ಎಂದು ಪ್ರಶ್ನೆ ಹಾಕುತ್ತೇನೆ. ಈ ಇಲಾಖೆಯಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಎಷ್ಟುಮಟ್ಟಿಗೆ ಸಂಬಳ ಹೆಚ್ಚಿಸಿದ್ದೀರಿ ಎಂದರೆ ಒಂದಕ್ಕೆ ಮೂರರಷ್ಟು ಎಂದು ಧಾರಾಳವಾಗಿ ಹೇಳಬಹುದು. 400 ರೂಪಾಯಿ ಸಂಬಳವಿದ್ದವರಿಗೆ 1,200, 1,400, 1,600, 1,950 ಹೀಗೆ ಕೊಡುತ್ತಿದ್ದೀರಿ. ಇದೂ ಅಲ್ಲದೆ ಒಂದೇ ದರ್ಜೆಯಲ್ಲಿರುವವರಲ್ಲಿ ಕೂಡ disparity ಎಷ್ಟಿದೆ ಎಂಬುದನ್ನು ತಿಳಿಸುತ್ತೇನೆ. ಮೈಸೂರಿನ ಕಾನ್‌ಸ್ಟೇಬಲುಗಳಿಗೆ 22 ರೂಪಾಯಿ ಕೊಟ್ಟರೆ ಬಳ್ಳಾರಿಯಲ್ಲಿರುವವರಿಗೆ 30 ರೂಪಾಯಿ ಕೊಡುತ್ತಿದ್ದೀರಿ; ಇಲ್ಲಿ ಇನ್‌ಸ್ಪೆಕ್ಟರುಗಳಿಗೆ 150-250 ರೂಪಾಯಿ ಇದ್ದರೆ, ಅಲ್ಲಿ 275 ಮ್ಯಾಕ್ಸಿಮಂ ಗ್ರೇಡ್ ಇದೆ. ಸಬ್ ಇನ್‌ಸ್ಪೆಕ್ಟರ್, ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಹೀಗೆ ಎಲ್ಲರ ಸಂಬಳ ಮತ್ತು ಗ್ರೇಡುಗಳಲ್ಲಿ ಇಲ್ಲಿಗೂ ಬಳ್ಳಾರಿಗೂ ವ್ಯತ್ಯಾಸವಿದೆ. ಹೀಗೆ ಒಂದೇ ಇಲಾಖೆಯಲ್ಲಿ ಒಂದೇ ಅಧಿಕಾರಕ್ಕೆ ಒಂದೇ ರೀತಿಯ ಕೆಲಸಕ್ಕೆ ಬೇರೆ ಬೇರೆ ಸಂಬಳಗಳಿವೆ. ಇದನ್ನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಇನ್ನು ಮುಂದೆ ನಮ್ಮ ಸಂಸ್ಥಾನವು ಇನ್ನೂ ಐದು ಸಂಸ್ಥಾನಗಳೊಡನೆ ಸೇರಬೇಕಾಗಿದೆ. ಈಗ ಬಳ್ಳಾರಿಯ ಐದಾರು ತಾಲ್ಲೂಕುಗಳನ್ನು ಸೇರಿಸಿಕೊಂಡಿರುವಾಗಲೇ ಸರಿಸಮಾನವಾದ ಸ್ಥಿತಿಗೆ ತರದೆ ಇರಬೇಕಾದರೆ, ಮದರಾಸ್, ಹೈದರಾಬಾದು, ಬೊಂಬಾಯಿ ಮತ್ತು ಕೊಡಗು, ಈ ಭಾಗಗಳು ಬರುವಾಗ ಅನೇಕ ವಿಧವಾದ ಸ್ಕೇಲುಗಳು ಇರುವುದರಿಂದ ಯಾವ ಕಾಲಕ್ಕೆ ಸರಿ ಹೊಂದಿಸುತ್ತೀರಿ? ನಾನು States Reorganisation Bill ಕೂಡ ನೋಡಿದ್ದೇನೆ. ಅದರಲ್ಲಿ ಯಾರಾರಿಗೆ ಯಾವ ಯಾವ ಗ್ರೇಡುಗಳಿವೆಯೋ ಅದೇ ಗ್ರೇಡುಗಳನ್ನೇ ಮುಂದುವರಿಸಬೇಕು, ಹಾಗಿಲ್ಲದೆ ಹೋದರೆ ಕೇಂದ್ರ ಸರ್ಕಾರದವರು ಏರ್ಪಾಡು ಮಾಡುತ್ತಾರೆ ಎಂದು ಹೇಳಿದ್ದಾರೆ. ಆಗ ಇಲ್ಲಿಯವರ ಅವಸ್ಥೆ ಏನಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು. ಏತಕ್ಕೋಸ್ಕರ ಈ ಸರ್ಕಾರದವರು ನಾಲ್ಕಾರು ವಿಧವಾದ ಸ್ಕೇಲುಗಳನ್ನು ಇಟ್ಟುಕೊಂಡು ಬಂದಿದ್ದಾರೆ, ಅದನ್ನು ಸಾಧ್ಯವಾದ ಮಟ್ಟಿಗೆ ಏತಕ್ಕ ಹೊಂದಾಣಿಕೆ ಮಾಡಬಾರದಾಗಿತ್ತು ಎಂದು ಸಹ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಕಾನ್‌ಸ್ಟೇಬಲುಗಳಿಗೆ ಸಂಬಳ ಜಾಸ್ತಿ ಮಾಡಬೇಕು, ಒಂದಕ್ಕೆ ಐದರಷ್ಟು ಜಾಸ್ತಿ ಮಾಡಿದರೂ ಒಳ್ಳೆಯದು ಎಂದು ಹೇಳುತ್ತೇನೆ. ಅವರಿಗೆ ನಾಲ್ಕೈದು ರೂಪಾಯಿಗಳನ್ನು ಜಾಸ್ತಿ ಮಾಡಿರುವುದು ಸಾಲದು. ಆದುದರಿಂದ ಆದಷ್ಟು ಜಾಗ್ರತೆ, ಅವರ ಜೀವನಕ್ಕೆ ಯಾವ ವಿಧವಾದ ಕೊರತೆಯೂ ಇಲ್ಲದ ರೀತಿಯಲ್ಲಿ ಸಂಬಳ ಕೊಡಬೇಕು. ಹೀಗೆ ಮಾಡುವಾಗ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಸಂಬಳವನ್ನು ಕಡಿಮೆ ಮಾಡಿದರೂ ತೊಂದರೆ ಇಲ್ಲ. ಕಾನ್‌ಸ್ಟೇಬಲುಗಳಿಗೆ ಮಾತ್ರ ಸಂಬಳ ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ. ಅದೂ ಅಲ್ಲದೇನೆ ಒಂದೇ ಗ್ರೇಡಿನಲ್ಲಿ ನಾಲ್ಕಾರು ತರಹ ಸಂಬಳ ಗೊತ್ತು ಮಾಡಿ ಒಂದೇ ತರಹ ಕೆಲಸ ಮಾಡಿಸಿಕೊಳ್ಳುವುದು ಸರಿಯಲ್ಲ. ಇದರಲ್ಲಿ ವ್ಯಾಪಕವಾದ ನೀತಿಯನ್ನನುಸರಿಸಿ ಬಹಳ ಮಟ್ಟಿಗಿರುವ ಅಸಮಾಧಾನ ಮತ್ತು ಅತೃಪ್ತಿಗಳ ಅವಕಾಶವನ್ನು ಹೋಗಲಾಡಿಸಬೇಕು. ಇದರಿಂದ ಲಂಚಕೋರರಿಗೆ ಅನುಕೂಲವಾಗಿದೆ. ಈ ಇಲಾಖೆ ವಿಚಾರ ಈಗಾಗಲೆ ಮಾನ್ಯ ಮಿತ್ರರು ಹೇಳಿದ್ದಾರೆ. ನಾನು ಹೇಳಿದರೆ ಅಷ್ಟು ಬೆಲೆ ಬರುವುದಿಲ್ಲ. ಶ್ರೀ ಬೋರಣ್ಣಗೌಡರೂ ಕೂಡ ಹೇಳಿದ್ದಾರೆ. ನಾವು ಎಷ್ಟು ಹೇಳಿದರೂ ಪೋಲೀಸಿನವರಾಗಲಿ ಅಥವಾ ಸರ್ಕಾರವಾಗಲಿ ಅದಕ್ಕೆ ಗಮನಕೊಡುವುದಿಲ್ಲ ಅದರಲ್ಲೂ ಪಾನ ನಿರೋಧದ ವಿಚಾರದಲ್ಲಿ ಪೋಲೀಸಿನವರು ಎಳ್ಳಷ್ಟೂ ಸಾರ್ವಜನಿಕರ ಅಭಿಪ್ರಾಯಕ್ಕೆ ಬೆಲೆಕೊಡುವುದಿಲ್ಲ. ಪೋಲೀಸಿನವರು ತಾತ್ಸಾರ ಮಾಡುತ್ತಿದ್ದರು, ಕಳ್ಳಬಟ್ಟಿ ತಯಾರಿಸುತ್ತಿದ್ದಾಗ ನಾನೇ ಹಿಡಿದು ಬುಕ್ ಮಾಡಿಸಿ ಬಂದಿದ್ದೇನೆ ಎಂದು ಕೈಗಾರಿಕಾ ಮಂತ್ರಿಗಳು ಕೂಡ ಹೇಳಿದ್ದಾರೆ. ರಾತ್ರಿ ಕಾವಲು ಹಾಕಿ ಬಂದೋಬಸ್ತು ಮಾಡಿ ಕಳ್ಳಬಟ್ಟಿ ಇಳಿಸುತ್ತಿದ್ದುದನ್ನು ಹಿಡಿದು ಹಾಕಿದ್ದೇನೆಂದು ಹೇಳಿದ್ದಾರೆ.

*Sri H. M. CHANNABASAPPA (Minister for Industries).—On a point of personal explanation. I have only told the Hon'ble Member an incident that happened in Shimoga where a few persons were carrying on trade in illicit liquor and the police made an Herculian effort to seize the property and take necessary action. It speaks only of the efficient work that the police people did.

Sri B. HUTCHE GOWDA.—With the direction of the Industries Minister. I do not think the police would have done all that and taken so much trouble. In that case, why did they not do it so far? It is going on for years together. ವಿರೋಧ ಪಕ್ಷದವರ ಮಾತು ಹಾಗಿರಲಿ, ಸರ್ಕಾರ ನಡೆಸುವ ಪಕ್ಷದವರೇ ಅವರ ನಿಸ್ಸಹಾಯಕತೆಯನ್ನು ಮಾನ್ಯ ಸಭೆಯಲ್ಲಿ ಹೇಳಿಕೊಂಡರು. ನಮ್ಮ ಮಾತಿಗೆ ಬೆಲೆಯಿಲ್ಲವೆಂದು ಶ್ರೀ ಬೋರಣ್ಣಗೌಡರೇ ಹೇಳಿದರು. ನಾವು ಹೇಳುವುದನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ ಎಂದು ಅಷ್ಟು ನಿಸ್ಸಹಾಯಕರಾಗಿ, ನಿರಾಶಾ ಮನೋಭಾವದಿಂದ ಎಲ್ಲರೂ ಮಾತನಾಡಿದ್ದಾರೆ. ಅದನ್ನು ನೋಡಿ ನನಗೂ ಕೂಡ ಬಹಳ ಮಟ್ಟಿಗೆ ವ್ಯಥೆಯಾಗುತ್ತದೆ. ಯಾವ ದೇಶದಲ್ಲಾಗಲಿ ಜನರ ಮಾನ, ಪ್ರಾಣ, ಆಸ್ತಿ ವಗೈರೆ ಕಾಪಾಡುವ ಪೋಲೀಸಿನವರ ದಕ್ಷತೆಗೆ ಧಕ್ಕೆ ಬರಬಾರದು. ಇದಕ್ಕೆ ಒಂದು ಕಾರಣ ಮುಂದು ಮಾಡುವುದು; ಕಡಮೆ ದರ್ಜೆ ನೌಕರರಿಗೆ ಹೆಚ್ಚು

(SRI B. HUTCHE GOWDA).

ಖರ್ಚಾಗುತ್ತದೆ, ಸಂಬಳ ಹೆಚ್ಚು ಮಾಡಿದರೆ ದೇಶಕ್ಕೆ ಕ್ಷೇಮವಾಗುವುದಿಲ್ಲ ಎಂಬುದು. ಈ ಇಲಾಖೆಗೆ ಕೊಡುವ 127 ಲಕ್ಷ ರೂಪಾಯಿಗಳನ್ನು ಕೂಡ ಯಾವ ರೀತಿ ವಿನಿಯೋಗ ಮಾಡಿದರೆ, ಯಾವ ರೀತಿ ಸಂಬಳ ಸಾರಿಗೆ ಮಾರ್ಪಾಟು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ, ದೇಶದಲ್ಲಿ ಶಾಂತಿ ಸಮಾಧಾನ ನೆಲೆಸುತ್ತದೆ ಎಂಬುದನ್ನು ಯೋಚನೆಮಾಡಿ ಅದರಂತೆ ಮಾಡಿ ದಕ್ಷತೆ ಹೆಚ್ಚಿಸಬೇಕು ಮತ್ತು ನಮ್ಮ ದೇಶಕ್ಕೆ ಕೀರ್ತಿ ತರುವಂತೆ ಈ ಇಲಾಖೆಯು ಕೆಲಸ ನಡೆಸಬೇಕು ಎಂದು ಸೂಚಿಸಿ ಈ ಡಿಮ್ಯಾಂಡ್ ಮನವಿಯನ್ನು ವಿರೋಧಿಸುತ್ತೇನೆ.

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಅಧ್ಯಕ್ಷರೆ, ಭದ್ರಾವತಿ ರಿಸರ್ವಾಯರ್ ಪ್ರಾಜೆಕ್ಟಿನ ಮತ್ತು ಟನಲ್ ಡಿವಿಷನ್‌ಗಳಲ್ಲಿ ಬಹಳ ಜನ ಕೆಲಸ ಮಾಡುತ್ತಿದ್ದಾರೆ, ಬಹು ಜನ ಆಂಧ್ರರು ಮತ್ತು ತಮಿಳರು ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ರೌಡೀಸ್ ಬಹಳ ಜಾಸ್ತಿ. ಅಲ್ಲಿ ಯಾವ ಪ್ರದೇಶವನ್ನು ಬಂದೊಬಸ್ತಿನಲ್ಲಿಡಬೇಕೋ ಅದಕ್ಕೆ ಪೋಲೀಸು ಸಿಬ್ಬಂದಿ ಏರ್ಪಾಡು ಮಾಡಬೇಕು. ನಾನು ಪರಿಶೀಲಿಸಿದ್ದರಲ್ಲಿ ಈ ಪ್ರಾಜೆಕ್ಟಿನಲ್ಲಿ ಇದಕ್ಕೆ ಪ್ರಾವಿಷನ್ ಇದೆಯೆಂದು ತಿಳಿಯಬಂತು. ಸಂಬಂಧಪಟ್ಟ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಪ್ರಪೋಸಲ್ ಕಳುಹಿಸಿ ತಕ್ಕಷ್ಟು ಪೋಲೀಸು ಇಲಾಖೆ ಸಿಬ್ಬಂದಿಯನ್ನು ಏರ್ಪಾಡು ಮಾಡುತ್ತೇವೆಂದು ಹೇಳಿದರು. ಆದರೆ ಲಾ ಅಂಡ್ ಆರ್ಡರ್ ಮೈಂಟೈನ್ ಮಾಡುವ ದೃಷ್ಟಿಯಿಂದ ಯಾವಾಗ ಅಲ್ಲಿ ಜನ ಹೆಚ್ಚಾಗಿ ಸೇರುತ್ತಿದ್ದಾರೋ ಆಗ ಅದಕ್ಕೆ ತಕ್ಕ ಹಾಗೆ ಕೂಡಲೆ ಪೋಲೀಸು ಸಿಬ್ಬಂದಿ ಏರ್ಪಾಡು ಮಾಡುವುದು ಪೋಲೀಸು ಇಲಾಖೆ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆ ಈ ಎರಡು ಇಲಾಖೆಗಳ ಕರ್ತವ್ಯ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಚನ್ನಗಿರಿ ತಾಲ್ಲೂಕು ಟನಲ್ ಡಿವಿಷನ್‌ನಲ್ಲಿ ಎರಡು ಕಡೆಯ ಜನರಿಗೆ ವ್ಯಾಜ್ಯವಾಗಿ ಅಂಚಿನ ಸಿದ್ದಾಪುರದಲ್ಲಿ ಬಹಳ ಗಲಾಟೆಯಾಗಿ ಮರ್ಡರ್ ಸಹ ಮಾಡಿದರೆಂದು ತಿಳಿದುಬಂದಿದೆ. ಈ ತರಹ ಆಂಧ್ರ ಮತ್ತು ತಮಿಳು ನಾಡಿನ ಜನರು ಹೆಚ್ಚಾಗಿ ಸೇರಿರುವ ಕಡೆ ತಕ್ಕ ಬಂದೋಬಸ್ತು ಮಾಡುವ ಕಾರ್ಯ ಕೈಕೊಳ್ಳುವುದು ಸರ್ಕಾರದ ಕರ್ತವ್ಯ. ಇದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

ಎರಡನೆಯದು ಪಾನನಿರೋಧದ ವಿಚಾರದಲ್ಲಿ ಪೋಲೀಸಿನವರ ದಕ್ಷತೆ ಕಡಮೆಯಾಗಿದೆಯೆಂದು ಈ ಸಂದರ್ಭದಲ್ಲಿ ವಾದ ನಡೆದಿದೆ. ನನ್ನ ಅಭಿಪ್ರಾಯವನ್ನು ಹಿಂದಿನ ವರ್ಷದ ಬಜೆಟ್ ಭಾಷಣ ಮಾಡುವಾಗ ಹೇಳಿದ್ದೆ. ಈ ಪಾನನಿರೋಧ ಮಾಡಿರುವ ಕಡೆ ಅದಕ್ಕೆ ಬೇಕಾದಷ್ಟು ಸಿಬ್ಬಂದಿಯನ್ನು ಯಾವ ಸರ್ಕಾರವೂ ಒದಗಿಸುವುದಕ್ಕಾಗುವುದಿಲ್ಲ. ಒಂದು ವೇಳೆ ತಪ್ಪಿತಸ್ತರನ್ನು ಹಿಡಿದು ಜುಲ್ಮಾನೆ ಹಾಕಿದರೆ, ಶ್ರೀ ಬೋರಣ್ಣ ಗೌಡರು ಹೇಳಿದ ಹಾಗೆ ಜುಲ್ಮಾನೆ ಕೊಟ್ಟು ಅದರ ನಾಲ್ಕೈದರಷ್ಟು ದುಡಿಮೆ ಮಾಡಬೇಕೆಂದು ತಮ್ಮ ಕೆಲಸವನ್ನು ಮುಂದುವರಿಸುತ್ತಾರೆ. ಇಂಥ ಮನೋಭಾವನೆ ಬೆಳೆದು ಬಂದಿದೆ. ಪೋಲೀಸಿನವರು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಫಿರ್ಯಾದು ಮಾಡುತ್ತಿಲ್ಲ. ಆದರೆ ಪಾನನಿರೋಧದನೀತಿ ಜಯಪ್ರದವಾಗುವುದಿಲ್ಲವೆಂಬುದು ನನ್ನ ವಾದ. ಹಿಂದೆ ಶ್ರೀ ಸಿ. ರಾಜಗೋಪಾಲಚಾರಿಯವರು ಮದರಾಸಿನಲ್ಲಿ ಹೇಳಿದ ಹಾಗೆ ಕುಡಿಯುವವರಿಗೆ ಪ್ರಿವೆಂಟಿವ್ ಡಿಟೆನ್ಷನ್ ಎಂದು ಮಾಡಿದರೆ ಒಂದು ವೇಳೆ ಸಾಧ್ಯವಾಗ ಬಹುದೋ ಏನೋ! ವಿಧಾನ ಸೌಧ ಕಟ್ಟಿದ ಹಾಗೆ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಒಂದು ದೊಡ್ಡ ಜೈಲನ್ನು ಕಟ್ಟಿದರೆ ಸಾಧ್ಯವಾಗಬಹುದು, ಅಲ್ಲಿಯವರೆಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಚನ್ನಗಿರಿ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಈ ಎರಡು ಕಡೆ ಪ್ರಾಜೆಕ್ಟ್ ಕೆಲಸ ಹೇರಳವಾಗಿ ನಡೆಯುತ್ತಿರುವುದರಿಂದ, ರೌಡೀಸ್ ಬಹಳ ಜನರಿರುವುದರಿಂದ ಲೋಕಲ್ ಪಾಪ್ಯುಲೇಷನ್ ಸೌಕರ್ಯಕ್ಕೆ ತಕ್ಕ ಬಂದೋಬಸ್ತು ಮಾಡುವುದು ಸರ್ಕಾರದ ಕರ್ತವ್ಯ. ಸರ್ಕಾರದ ಗಮನವನ್ನು ಈ ಕಡೆ ಸೆಳೆಯಲು ನಾನು ಇದನ್ನೆಲ್ಲಾ ಹೇಳಿದೆ.

*Sri P. M. SWAMIDURAI (K.G.F.—Scheduled Castes).—Sir, I want to bring to the notice of the Government some undue excesses on the part of some of the police. I say 'some' because there are good officials also in the department. In the Kolar Gold Fields in the year 1950 or so there was a Superintendent of Police who appeared to be very rough outwardly, but his attitude towards the public was very good. In the year 1953-54 or so, there was another officer who appeared to be very nice but was a dangerous person to the public. He was doing more harm to the public than good.

Sri H. SIDDAVEERAPPA (Minister for Home).—It was during his regime that a case was launched against you, I suppose.

Sri P. M. SWAMIDURAI.—According to rules he has done it. I have no grievance about that nor have I any complaint. I have taken it smoothly. There is another officer who is said to be very good; but I had no occasion to meet him except once, and form any opinion. I want to bring a specific instance to the notice of Government and that is, with regard to the traffic control. Traffic control has recently been introduced and it is very good. But, there is a particular policeman—I think he is a Jamedar—whose behaviour towards the public is very unhappy. I suppose he is not an Indian. He shouts at people in a very rough manner and in a manner which irritates anybody. Once, I was passiag through that road where he was on duty and I saw him shouting at a person going on the other side in a very rude way. I advised him not to do that and told him that he should make use of the whistle that is supplied to him instead of shouting at people.

No doubt those who violate law must be punished. But there is a way in which they should be cautioned and guided.

Sir, there was a police lock-up incident in Oorgaum. A man died in the lock-up. People say many things about the incident. Some say, he was murdered; some other say, he committed suicide. There is a strong impression about this in the mind of the people there that that individual was harassed by the people and he was tortured. People say that he committed suicide due to the excess torture by the police; some say that he was actually murdered by the police. The police version is that the man committed suicide in the lock-up. Sir, why should a man commit suicide in the lock-up ? When he was in the custody of the police, it was their sacred duty to see that his life was safe. Instead of that, he is finished and I do not know how he was finished. I cannot say for certain whether it was a suicide or a murder ; but the inquest of the Doctor says that it was suicide. But the point that I want to bring to the notice of the House and the Government is that that man was kept in police custody for more than 24 hours without the permission of the Magistrate. The Munsiff-Magistrate came there and conducted the inquest. I was present there. The police all the while insisted the Magistrate to have the evidence of the witness of a man who was a co-accused with the deceased that night. The Magistrate refused.

2-30 P.M.

Then another third party came in and gave evidence that the man in the lock-up was there for about 10 days because that man was also an accused and he was put in that particular lock-up along with him and he said that the man was already there for about 10 days and that was what the deceased person had said to him.

Mr. SPEAKER.—I want to know whether that case is pending.

Sri P. M. SWAMIDURAI.—No. If the case were pending, the Hon'ble Home Minister would have objected to my raising the matter here. There was the information that the man was in the lock-up for more than 24 hours. Then the Magistrate insisted that the other witness whom the Police wanted to cite be brought. That man was brought and he gave evidence. The Police said that these two accused were brought on a particular Saturday and that this particular accused died early morning on Sunday. But that co-accused gave evidenee saying that he was brought alone and nobody else was brought, that this particular accused was in the lock-up already and that he did not know for how long. This co-accused said that he was brought on Friday, whereas the Police said that both the accused were brought on Saturday. There is the other evidence that the accused in question was in the lock-up for more than 24 hours. So I urge the Government to enquire into this particular incident and find out why the Police are keeping persons in the lock-up for more than 24 hours without the permission of the Magistrate. Thereby I do not mean that the Police should obtain the permission and keep the man and torture him. I know some of the local people were also detained like that. I represented this to one of my best friends, an Hon'ble Member of the Legislature, an efficient Advocate and he said " These are the ways of the Police. It is going on." Then I kept quiet. My point is that it should not go on like that.

Another thing. With regard to the use of the loud speaker, you know with what intention that Act was passed this year. Why they want to exercise undue power, is my question. In some cases when a party goes and approaches the Police for a licence to use the loud speaker for marriage, for playing music and other local functions, they seem to direct the party not to include as speaker, certain X, Y, Z and I ask that party to come with me to give evidence. He is afraid and says' You know what will be my fate'. Such is the affair. We expect the Police to be reasonable and use discretion in this matter. It is true that we have to regulate and control, but there should be no undue control and regulation.

Mr. SPEAKER.—The Hon'ble Member must close.

Sri P. M. SWAMIDURAI.—If that is the will of the Speaker, I close my speech. I thank you very much for having given me an opportunity to speak. I only appeal to the Government to take note of all these points and make an enquiry and do the needful.

Sri K. S. VASAN.—I won't repeat what my friends Sri Boranna Gowda and Sri Hanumiah said with regard to the behaviour of the Police in respect of enforcement of prohibition. While in K.G.F. too the Policemen misbehave, I will not be uncharitable to them and make them wholly responsible for the failure of prohibition. I always hold that even if all the Policemen are honest, prohibition cannot be a success and prohibition can never be a success in K.G.F. in any case. Further I only want to bring to the notice of the House an incident that occurred in Oorgaum Police Station on the 5th February. One grave-digger, an ex-mine worker by name Natesan was taken into Police custody on the 26th January on a complaint.

Sri H. SIDDAVEERAPPA.—You may put an interpellation. I will answer that.

Sri K. S. VASAN.—I only appeal to the Government that in the interests of fair administration of Police, an enquiry into this incident by a high judicial officer be ordered.

***Sri B. T. KEMPARAJ** (Bangalore South—Scheduled Castes).—On this demand, I want to make only one point clear to the Government. Though the matter is a very simple one, it is creating greatest injury and also financial loss to the public. It is a well known fact that the Majestic Square is a bus stand. There are no police constables there to supervise the traffic or to control the passengers that get into the buses. It is my daily experience that after the cinema is over at about 9-30 P.M. there will be a rush to get into the bus. Then the pick-pockets also pretend to get into the bus and commit pick-pocketing. Three or four or half a dozen persons will lose their purses. Once a passenger lost a purse containing about Rs. 300. On a Sunday the military people from Jalahalli come to the City. At that time the pick-pockets stand there and they will cut the pockets very easily. Coolies come to the City and while they enter into the bus, their purses will be lost. Though I have brought this to the notice of the concerned Police officer, nothing has been done hitherto. Therefore, I urge upon the Government to take this matter seriously into consideration and see that the traffic is controlled properly and also the queue system is maintained as it was previously, in almost all the bus stands in the Bangalore City and Civil Station.

ಶ್ರೀ ಕೆ. ಕೊಟ್ರ ಬಸವನ ಗೌಡ (ಕೂಡ್ಲಿಗಿ).—ಮಾನ್ಯ ಸಭಾಧ್ಯಕ್ಷರೇ, ನಾನು ಈಗ ಆ ನಮ್ಮ ಬಳ್ಳಾರಿ ಜಿಲ್ಲೆಯ ಪೋಲೀಸ್ ಆಡಳಿತದ ವಿಚಾರವಾಗಿ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರ ಬಯಸುತ್ತೇನೆ. ಸಾಧಾರಣವಾಗಿ ಈ ಪೋಲೀಸ್ ಇಲಾಖೆಯಲ್ಲಿ ಈ ಎರಡನೇ ಯುದ್ಧಾನಂತರ—1945 ನೆಯ ಇಸವಿಯಿಂದೀಚೆಗೆ ಈ ಕರಪ್ಷನ್ ಎನ್ನುವುದು ವರ್ಷೆ ವರ್ಷೆ ಈ ಸಂವತ್ಸರಗಳು ಏರುತ್ತಿರುವಂತೆ ಇದೂ ಏರುತ್ತಿದೆ. ಈ ಲಂಚ-ರುಷವತ್ತುಗಳು ವಿಪರೀತವಾಗಿ ಹೆಚ್ಚುತ್ತಿದೆ. ಅದರಲ್ಲೂ ಆ ನಮ್ಮ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿದ ಮೇಲಂತೂ ಇದಿನ್ನೂ ವಿಶೇಷವಾಗಿದೆ. ಈ ಪೋಲೀಸ್ ಇಲಾಖೆಯಿರುವುದೇನು ದೇಶದಲ್ಲಿ whether to keep law and order or to disturb the law or order ಎನ್ನುವುದೇ ನಮ್ಮ ಜಿಲ್ಲೆಯ ಜನರಿಗೆ ತುಂಬಾ ಸಂಶಯಾಸ್ಪದವಾಗಿದೆ. ಅದರಲ್ಲೂ ನಮ್ಮ ಆ ವೆಸ್ಟರ್ನ್ ತಾಲ್ಲೂಕುಗಳಲ್ಲಿ ಈ ಲಂಚ-ರುಷವತ್ತು ಇನ್ನೂ ವಿಶೇಷವಾಗಿದೆ. ಪೋಲೀಸಿನವರು ಕೆಲವು ರೌಡೀಸ್‌ಗಳನ್ನೂ ಮತ್ತು ದಳ್ಳಾಳಿ ಜನರನ್ನು ಮಾಡಿಕೊಂಡಿದ್ದಾರೆ. ಈ ರೌಡೀಸ್‌ಗಳು ಆ ಪೋಲೀಸರ ಸಹಾಯದಿಂದ ದೊಡ್ಡ ದೊಡ್ಡ ಮನುಷ್ಯರುಗಳಿಗೂ ಮತ್ತು ಲಾ ಅಬೈಡಿಂಗ್ ಜನಗಳಿಗೂ ಅನವಶ್ಯಕವಾಗಿ ತೊಂದರೆಗಳನ್ನು ಕೊಡುತ್ತಿದ್ದಾರೆ. ಇಷ್ಟೇ ಅಲ್ಲದೆ ಆ ಪೋಲೀಸಿನವರೇ ಕೆಲವುಸಾರಿ ತಾವೇ ಒಳಸಂಚುಮಾಡಿ ಈ ಕಳ್ಳತನಗಳನ್ನು ನಡೆಸುತ್ತಿದ್ದಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಕಳ್ಳತನವಾಗಿದೆ ಎಂದು ಮಾಲನ್ನು ಕಳೆದು ಕೊಂಡವರು ಫಿರ್ಯಾದನ್ನು ಕೊಟ್ಟರೆ ಅಂಥಾ ಸಮಯದಲ್ಲಿ ಈ ಪೋಲೀಸರು ಯಾರಿಂದಲೋ ಒಂದು ಸುಳ್ಳು ರಿಪೋರ್ಟನ್ನು ತಮಗೆ ಬರುವಂತೆ ಮಾಡಿಕೊಂಡು ಆ ಮೂಲಕ ಊರಿನಲ್ಲಿರತಕ್ಕಂಥ ದೊಡ್ಡ ಮನುಷ್ಯರಿಗೆ—ಹಣವಂತರಿಗೆ ಹೆದರಿಸಿ-ಬೆದರಿಸಿ ವಿನಾ ತೊಂದರೆಗಳನ್ನು ಕೊಡುತ್ತಿದ್ದಾರೆ. ಅಂಥವರಿಂದ ನೂರಾರು ರೂಪಾಯಿಗಳ ಲಂಚವನ್ನು ಹೊಡೆಯುತ್ತಿದ್ದಾರೆ. ಹೀಗೆ ಲಂಚ ಬಂದಕೂಡಲೇ ಅವರನ್ನು ಬಿಟ್ಟುಬಿಡುತ್ತಾರೆ. ಊರಿನಲ್ಲಿರತಕ್ಕಂಥ ಯಾರಾದರೂ ದೊಡ್ಡ ಮನುಷ್ಯರು—ಗೌರವಸ್ಥರಾಗಿರತಕ್ಕಂಥವರು ಪೋಲೀಸ್ ಅಧಿಕಾರಿಗಳ ಬಳಿ ಹೋಗಿ ನಿಮ್ಮ ನೌಕರರು ಹೀಗೆಲ್ಲಾ ಮಾಡುತ್ತಿದ್ದಾರೆ, ಜನರಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ, ವಿಪರೀತವಾಗಿ ಲಂಚ

ತೆಗೆದುಕೊಳ್ಳುತ್ತಿದ್ದಾರೆ ಎಂದು ಫಿರ್ಯಾದು ಕೊಟ್ಟರೆ-ಕೆಲವು ದಿವಸಗಳವರೆಗೂ ಹಾಗೇ ಸುಮ್ಮನಿದ್ದು ಅನಂತರ ಆ ಪೋಲೀಸಿನವರೇ ಆ ರೌಡೀಸ್‌ಗಳನ್ನು ಬಿಟ್ಟು—ಅವರಿಗೆ ಇವರೇ ಚುಚ್ಚಿಕೊಟ್ಟು ಆ ಮರ್ಯಾದಸ್ಥರಿಗೆಲ್ಲಾ ಬೀದಿಗಳಲ್ಲಿ ಅವಮಾನ ಪಡಿಸುವುದು, ಅವರ ಬಗ್ಗೆ ಸುಳ್ಳು ಆರೋಪಣೆಗಳನ್ನು ಹೊರಿಸುವುದು, ಅವರ ಮೇಲೆ ಸುಳ್ಳು ಫಿರ್ಯಾದುಗಳನ್ನು ಮಾಡುವುದು, ಅವರ ಬಗ್ಗೆ ಅಲ್ಲದ-ಸಲ್ಲದ ರಿಕಾರ್ಡುಗಳನ್ನು ಮಾಡುವುದು-ಹೀಗೆಲ್ಲ ಮಾಡಿ ಇವರ ಮೇಲೆ ದೂರು ಹೇಳಿದಂಥ ಜನರಿಗೆ ತೊಂದರೆಗಳನ್ನು ಕೊಡುತ್ತಿದ್ದಾರೆ. ಹೀಗಾಗಿ ಆ ಜಿಲ್ಲೆಯಲ್ಲಿ ಜನರು ಅಸಾಧ್ಯ ತೊಂದರೆಗೀಡಾಗಿದ್ದಾರೆ. ಅಲ್ಲಿಯ ಸಾರ್ವಜನಿಕರಿಗೆಲ್ಲಾ ಈ ಪೋಲೀಸ್ ಇಲಾಖೆಯ ಜನರು ಎಂದರೆ ಒಂದು ದೊಡ್ಡ ಪ್ರಾಬ್ಲೆಂ (ಸಮಸ್ಯೆ) ಆಗಿದೆ. ಈ ಬಗ್ಗೆ ಆ ಪೋಲೀಸ್ ಅಸಿಸ್ಟೆಂಟ್ ಮತ್ತು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಿಗೆ ಫಿರ್ಯಾದು ಕೊಟ್ಟರೆ ಅವರು ಸರಳವಾಗಿ ಆಗಲಿ ನಾವು ನೋಡುತ್ತೇವೆ ಎಂದು ಹೇಳಿಬಿಡುತ್ತಾರೆ. ಈ ಇಲಾಖೆಯಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ನಿಂದ ಹಿಡಿದು ಪೋಲೀಸ್ ಇನ್‌ಸ್ಪೆಕ್ಟರ ಗ್ರೇಡಿನ ವರೆಗೂ ಇರತಕ್ಕ ಎಲ್ಲಾ ನೌಕರರೂ ಪಬ್ಲಿಕ್ ರಸ್ತೆಗಳಲ್ಲೇ ಬಹಿರಂಗವಾಗಿ ಲಂಚ ಕೇಳುತ್ತಿರುತ್ತಾರೆ. ಇವರು ನಿರ್ಭಯವಾಗಿಯೇ ಆ ಪ್ಲೀಡರ್ಸ್ ಮತ್ತು ದೊಡ್ಡ ದೊಡ್ಡ ಮರ್ಯಾದಸ್ಥ ಜನರ ಸಮಕ್ಷದಲ್ಲೇ ಲಂಚವನ್ನು ಕೇಳುತ್ತಿರುತ್ತಾರೆ.

ಇನ್ನು ಈ ಪಾನ ನಿರೋಧದ ವಿಚಾರ ತೆಗೆದುಕೊಂಡರೆ ಇದು ಶೇಕಡಾ 90 ರಷ್ಟು ಫೆಯಿಲ್ಯೂರ್ ಆಗಿದೆ. ಈ ಹರಿಜನರನ್ನು ಮತ್ತು ಇತರ ಬಹಳ ಬಡವರಾಗಿರತಕ್ಕಂಥ ಜನರನ್ನು ಬಿಟ್ಟರೆ ಉಳಿದವರೆಲ್ಲಾ ಈಗ ಕುಡಿತ ಬಹಳ ಹೆಚ್ಚಾಗಿದೆ. ಪ್ರೊಹಿಬಿಷನ್ ಹೆಸರಿಗೆ ಮಾತ್ರ ಇದೆ. ಆದರೆ ಪ್ರತಿ ಹಳ್ಳಿಯಲ್ಲೂ—ಪ್ರತಿ ದಿನವೂ ಕುಡಿಯುವುದೂ—ಮತ್ತು ಮಾದಕ ವಸ್ತುಗಳ ಮಾರಾಟಗಳೂ ನಡೆಯುತ್ತಲೇ ಇದೆ. ಪೋಲೀಸ್ ಕಾನ್‌ಸ್ಟೇಬಲ್ ನಿಂದ ಹಿಡಿದು ಇನ್‌ಸ್ಪೆಕ್ಟರ ವರೆಗೂ ಒಂದು ಮಾಮೂಲಿ ಮಾಡಿಕೊಂಡಿದ್ದಾರೆ. ಆ ಮಾಮೂಲಿ ಹಣ ಇವರ ಕೈಗೆ ಬಿದ್ದರೆ ಅಲ್ಲಿ ಈ ಇಲಿಸಿಟ್ ಡಿಸ್ಟಿಲೇಷನ್‌ಗೆ ಸದಾ ಅವಕಾಶವಿದ್ದೇ ಇರುತ್ತದೆ. ಈ ವಿಚಾರ ಅಲ್ಲಿನ ಎಲ್ಲ ಅಧಿಕಾರಿಗಳಿಗೂ, ಎ.ಎಸ್.ಪಿ. ಮತ್ತು ಡಿ.ಎಸ್.ಪಿ. ಇವರೆಲ್ಲರಿಗೂ ತಿಳಿದಿದ್ದರೂ—ಇದು ಆ ಬಳ್ಳಾರಿ ಟೌನಿನಲ್ಲೇ ಬಹಿರಂಗವಾಗಿ ನಡೆಯುತ್ತಿದ್ದರೂ ಈ ಬಗ್ಗೆ ಯಾರೂ ಏನೂ ಕ್ರಮವನ್ನು ಕೈಗೊಂಡಿಲ್ಲ. ಇದನ್ನೆಲ್ಲಾ ನೋಡಿದರೆ ಈ ಮೈಸೂರು ಆಫೀಸರ್ಸ್‌ಗಳ ಮೃದು ಸ್ವಭಾವವೇ ಕಾರಣವೆಂದು ನನಗೆ ಅನ್ನಿಸುತ್ತದೆ. ಅಲ್ಲಿಯ ಪೋಲೀಸ್ ನೌಕರರು ನಮಗೆ ಮೈಸೂರು ಸರ್ಕಾರ ಬಹಳ ಕಮ್ಮಿ ಸಂಬಳ ಕೊಡುತ್ತದೆ, F.T.A. ಬಹಳ ಕಡಮೆ ಇದೆ, ಅದಕ್ಕೋಸ್ಕರವಾಗಿ ನಾವು ಈ ಲಂಚವನ್ನು ತೆಗೆದುಕೊಳ್ಳುತಿದ್ದೇವೆ, ಹೀಗೆ ಮಾಡದಿದ್ದರೆ ನಮ್ಮ ಖರ್ಚಿಗೆ ಹಣ ಸಾಲದೆ ಬರುತ್ತದೆ ಎಂದು ಹೇಳುತ್ತಿದ್ದಾರೆ. ಆದಕಾರಣ ದಯಮಾಡಿ ಸರ್ಕಾರದವರು ಆ ನಮ್ಮ ಜಿಲ್ಲೆಯ ಸಂಪೂರ್ಣ ಪೋಲೀಸ್ ಸಿಬ್ಬಂದಿಯನ್ನು ಬೇರೆ ಜಿಲ್ಲೆಗೆ ವರ್ಗಾಯಿಸಿ, ಈ ಕಡೆಯ ಭಾಗದಲ್ಲಿರುವ ಪೋಲೀಸಿನವರನ್ನೇ ಆ ಸ್ಥಳಕ್ಕೆ ಹಾಕಬೇಕೆಂದು ನನ್ನ ಅರಿಕೆ.

ಇನ್ನು ಈ ಪೋಲೀಸಿನವರೇ ಲಂಚ ತೆಗೆದುಕೊಂಡು ದೇವಿ ಜಾತ್ರೆಗಳಲ್ಲಿ ಈ ಕುರಿ-ಕೋಣ, ಮೇಕೆ ಇತ್ಯಾದಿ ಪ್ರಾಣಿಗಳನ್ನು ಕಡಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಜನರು ಬೈಲಾಟ ಇತ್ಯಾದಿಗಳನ್ನು ಆಡಬೇಕೆಂದು ಕೇಳಿದರೆ—ಅವರಿಗೆ ಇಲ್ಲದ ತೊಂದರೆಗಳನ್ನು ಕೊಟ್ಟು ಅವರಿಂದ ಹಣ ತೆಗೆದು ಕೊಂಡು ಅನಂತರ ಅವರಿಗೆ ಆಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ.

ಇನ್ನು ಈ ಸಾಲುಮರಗಳನ್ನು ಯಾರಾದರೂ ಕಡಿಯುತ್ತಿದ್ದರೆ—ಅದನ್ನು ಈ ಪೋಲೀಸಿನವರು ನೋಡಿದರೂ ಅವರ ಬಗ್ಗೆ ಇವರು ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಅಥವಾ ಅಂಥ ಜನರನ್ನು ಹೆದರಿಸುವುದೂ ಸಹ ಇಲ್ಲ. ಆದಕಾರಣ ಈ ಪೋಲೀಸಿನವರಿಗೆ ಈ ಸಾಲುಮರಗಳ ಬಗ್ಗೆ ನಿಗಾ ಇಡುವಂತೆ ಒಂದು ಸೂಚನೆಯನ್ನು ಸರ್ಕಾರದವರು ಕೊಡುವಂತೆ ಮಾಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಅಧ್ಯಕ್ಷರೇ ಈ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ಒಂದೆರಡು ವಿಷಯಗಳಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಬೇಕೆಂದು ಆಶಿಸುತ್ತೇನೆ. ಮಾನ್ಯ ಸ್ನೇಹಿತರನೇಕರು ಈ ವಿಷಯದಲ್ಲಿ ಸರ್ಕಾರದವರಿಗೆ ಚೆನ್ನಾಗಿ ಮನದಟ್ಟಾಗುವಂತೆ ಹೇಳಿದ್ದಾರೆ. ಈಗ ಬೆಂಗಳೂರು ಸಿಟಿ ಸುತ್ತಮುತ್ತಲೂ ಇಂಡಸ್ಟ್ರಿಯಲ್ ಏರಿಯಾ ಬಹಳ ಜಾಸ್ತಿಯಾಗಿ ಅದರ ಅವಾಂತರ ಎಷ್ಟರಮಟ್ಟಿಗೆ ಆಗಿದೆ ಎಂದರೆ ಅಲ್ಲಿ ರೈತಾಪಿ ಜನರು ವಾಸಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗೆ ಆಗಿದೆ. ಅದೂ ಅಲ್ಲದೇ ಈ ಮಿಲಿಟರಿಯವರ ಸಂಖ್ಯೆಯೂ ಕೂಡ ಬಹಳ ಜಾಸ್ತಿಯಾಗಿದ್ದು ಸಾಕಾದಷ್ಟು ಪೋಲೀಸ್ ಸಿಬ್ಬಂದಿ, ಪೋಲೀಸ್ ಪಹರೆ ಇಲ್ಲದೆ ರೈತಾಪಿ ಜನರ ಕೆಲಸ ಕಾರ್ಯಗಳಿಗೆ ಬಹಳ ಕಷ್ಟವಾಗಿದೆ. ಐ. ಪಿ. ಸೆಟ್ಸ್ ಇಟ್ಟುಕೊಂಡು ಕೆಲಸ ಮಾಡುತ್ತಿರುವವರು, ಪಂಪ್ ಹೌಸಿನಲ್ಲಿ ಸಾಮಾನುಗಳನ್ನಿಟ್ಟುಕೊಂಡು ಅವುಗಳನ್ನು ಸುರಕ್ಷಿತವಾಗಿ ಕಾಪಾಡುವುದಕ್ಕೆ ಸಾಧ್ಯವಿಲ್ಲದೆ ಅನೇಕ ತೊಂದರೆಗಳಿಗೆ ಈಡಾಗುತ್ತಾ ಇದ್ದಾರೆ. ಪಂಪ್ ಹೌಸ್‌ನಲ್ಲಿರತಕ್ಕ ಸಾಮಾನುಗಳನ್ನು ಕಳುವು ಮಾಡುತ್ತಾರೆ. ಅವರ ಐಡೆಂಟಿಫಿಕೇಷನ್ ಪ್ರೂವ್ ಮಾಡುವುದಕ್ಕೆ ಸಾಧ್ಯವಿಲ್ಲದೆ ಏನು ಮಾಡುವುದಕ್ಕೂ ಆಗುತ್ತಿಲ್ಲ. ಪೋಲೀಸ್‌ನವರ ವಿಜಿಲೆನ್ಸ್ ಸಾಲದು. ಈಗ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಪೋಲೀಸ್ ಇನ್‌ಸ್ಪೆಕ್ಟರಿಗೂ, ಸಬ್ ಇನ್‌ಸ್ಪೆಕ್ಟರಿಗೂ ಸರಿಯಾದ ಒಂದು ಹೊಂದಾಣಿಕೆ (understanding) ಇಲ್ಲದೆ, ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳಿಕೊಂಡು ಸರಿಯಾದ ರಕ್ಷಣೆ ಕೊಡುತ್ತಾ ಇಲ್ಲ. ಸಾರ್ವಜನಿಕರು ಸಬ್ ಇನ್‌ಸ್ಪೆಕ್ಟರನ್ನು approach ಮಾಡಿದರೆ ಇನ್‌ಸ್ಪೆಕ್ಟರು ಅವರ ಮುಖಾಂತರವೇ ಕೆಲಸ ಮಾಡಿಸಿಕೊಳ್ಳಿ ಎನ್ನುವುದು, ಇನ್‌ಸ್ಪೆಕ್ಟರನ್ನು approach ಮಾಡಿದರೆ ಸಬ್ ಇನ್‌ಸ್ಪೆಕ್ಟರು, ಇನ್‌ಸ್ಪೆಕ್ಟರ ಮುಖಾಂತರವೇ ಕೆಲಸ ಮಾಡಿಸಿಕೊಳ್ಳಿ ಎನ್ನುವುದು ಹೀಗಾಗಿ ಅವರವರಲ್ಲಿ ಹೊಂದಾಣಿಕೆ ಇಲ್ಲದೆ ಜನರು ಸರಿಯಾದ ರಕ್ಷಣೆ ಸಿಕ್ಕದೆ ಬಹಳ ಕಷ್ಟವನ್ನು ಅನುಭವಿಸುತ್ತಾ ಇದ್ದಾರೆ.

ಇದೆಲ್ಲಕ್ಕಿಂತಲೂ ಹೆಚ್ಚಾಗಿ ಬೆಂಗಳೂರಿನಲ್ಲಿ ಇನ್ನೊಂದು ಅವಾಂತರ ಬಹಳ ಹೆಚ್ಚಾಗಿದೆ. ಬೆಂಗಳೂರು ಸಿಟಿ ಮತ್ತು ಸಿವಿಲ್ ಸ್ಟೇಷನ್‌ನಲ್ಲಿ ಎಸ್.ಪಿ.ಸಿ.ಎ. ಮತ್ತು ಎಸ್.ಪಿ.ಕೆ.ಎ. ಎಂಬ ಎರಡು ಸಂಸ್ಥೆಗಳು ಕೆಲಸ ಮಾಡುತ್ತಾ ಇವೆ. ಈ ಸಂಸ್ಥೆಗಳವರು ದನಗಳಿಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳಿಕೊಂಡು ಹಳ್ಳಿಗಳಿಂದ ಬರತಕ್ಕ ಎತ್ತಿನ ಗಾಡಿಗಳನ್ನು ಹಿಡಿದು ಎತ್ತಿನ ಕಾಲಿನಲ್ಲಿ ರಕ್ತ ಸುರಿಯುತ್ತಿದೆ ಹಾಗಿದೆ, ಹೀಗಿದೆ

(ಶ್ರೀ ಕೆ. ವಿ. ಬೈರೇಗೌಡ).

ಎಂದು ಹೇಳಿ ಅವರಿಂದ ಏನಾದರೂ ಒಂದಷ್ಟು ದುಡ್ಡು ಕಸಿದುಕೊಂಡು ಬಿಟ್ಟುಬಿಡುತ್ತಾರೆ. ಒಂದು ವೇಳೆ ಅವರು ದುಡ್ಡು ಕೊಡದೇ ಇದ್ದರೆ ಕಾನೂನು ಪ್ರಕಾರ ಕೇಸು ಹಾಕುತ್ತಾರೆ. ಎಂದೋ ಒಂದು ದಿವಸ ಬೆಂಗಳೂರಿಗೆ ಧಾನ್ಯ ತೆಗೆದುಕೊಂಡು ಬಂದು ಮಾರಾಟಮಾಡಿ ಲಾಭ ಬಂತು ಪರವಾಗಿಲ್ಲ ಎಂದು ಅವನು ಅಂದುಕೊಂಡಿದ್ದ ಕಾಲದಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹೋಗಿ ಅಲೆಯಬೇಕಾಗುತ್ತದೆ. ಇದನ್ನು ನಾವು ಕಣ್ಣಾರ ನೋಡಿದ್ದೇವೆ. ಎಷ್ಟೋ ಕುದುರೆಗಳಿಗೆ ಕಾಲಿನಲ್ಲಿ ರಕ್ತ ಸುರಿಯುತ್ತಿರುತ್ತದೆ. ಅಂಥ ಕುದುರೆಗಳನ್ನು ಕಟ್ಟಿದ್ದರೂ ಕೂಡ ಅದನ್ನು ಸುಮ್ಮನೆ ಬಿಟ್ಟುಬಿಡುತ್ತಾರೆ. ಪೋಲೀಸ್‌ನವರಿಗೂ ಮತ್ತು ಈ ಸಂಸ್ಥೆಯವರಿಗೂ ಒಂದು understanding ಇದೆ. ಸಾಧಾರಣವಾಗಿ ಬಡ ರೈತರನ್ನೇ ಅವರು ಹಿಡಿದುಕೊಂಡು ಕೋರ್ಟಿನಲ್ಲಿ ಕೇಸು ಹಾಕುತ್ತಾರೆ. ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಇದನ್ನು ಕೂಡಲೇ ವಿಚಾರಣೆ ಮಾಡಬೇಕು. ಕಾನೂನು ದೃಷ್ಟಿಯಿಂದ ಯಾವುದು ಮಾಡಬೇಕೋ ಅದನ್ನು ಮಾಡದೆ, ಬೇರೆ ಮಾರ್ಗವನ್ನನುಸರಿಸುತ್ತಿರುವುದು ರೈತರಿಗೆ ನಿಜವಾಗಿಯೂ ಬಹಳ ತೊಂದರೆಯಾಗಿದೆ. ಅದಕ್ಕೆ ಸಾಕಾದಷ್ಟು ಗಮನ ಕೊಡದೇ ಇರುವುದು ಬಹಳ ವ್ಯಸನಕರವಾಗಿದೆ.

ನಮ್ಮ ಮಾನ್ಯ ಮಿತ್ರರಾದ ಶ್ರೀ ಕೆಂಪರಾಜ್‌ರವರು ಮೆಜಸ್ಟಿಕ್ ಚೌಕದ ಹತ್ತಿರ ನಡೆಯುತ್ತಿರುವ ವಿಷಯವನ್ನು ಹೇಳಿದರು. ಯಲಹಂಕ, ಜಾಲಹಳ್ಳಿ ಕಡೆಗೆ ಹೋಗುವ ಬಸ್ಸು ಪ್ರತಿ 45 ನಿಮಿಷಕ್ಕೆ ಒಂದು ಸಾರಿ ಹೋಗುತ್ತದೆ ಎಂದು ಹಾಕಿದ್ದಾರೆ. ಬಸ್ ಸ್ಟ್ಯಾಂಡಿನಲ್ಲಿ 45 ನಿಮಿಷ ಕಾಳಿತುಕೊಂಡಿರಬೇಕು. ಅಲ್ಲಿ ಬಸ್ ಹತ್ತುವಾಗ ಜನಸಂದಣಿ (rush) ಎಷ್ಟಿರುತ್ತದೆ ಎಂದರೆ ಒಳ್ಳೆಯ ಡೀಸೆಂಟ್ ಆಗಿರುವವರು ಯಾರಿಗೂ ಬಸ್ಸಿನ ಒಳಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ಜಾಲಹಳ್ಳಿಗೆ ಹೋಗುವ ಬಸ್ಸಿಗೆ ಮಿಲಿಟರಿಯವರು ಬರುತ್ತಾರೆ. ಅವರ ಹತ್ತಿರ ಇತರರು ಯಾರೂ ಸೇರುವ ಹಾಗೇ ಇಲ್ಲ. ಯಾರಾದರೂ ಹೋದರೆ ಅವರ ಗತಿ ಆಯಿತು ಬೂಡ್ಸ್ ಕಾಲಿನಿಂದ ತುಳಿದುಬಿಡುತ್ತಾರೆ. ನಮ್ಮ ಪೋಲೀಸ್‌ನವರು ಅಲ್ಲೇ ಇರುತ್ತಾರೆ. ಪಕ್ಕದಲ್ಲೇ ಒಂದು ಪೋಲೀಸ್ ಔಟ್ ಪೋಸ್ಟು ಇದೆ. ಅವರಿಗೆ ಯಾರಾದರೂ ಹೋಗಿ ಸ್ವಲ್ಪ ತಹಬಂದಿಗೆ ತನ್ನಿ ಎಂದರೆ ಅವರು ಅದಕ್ಕೆ ಗಮನವನ್ನೇ ಕೊಡುವುದಿಲ್ಲ. ಈ ರೀತಿ ಅವ್ಯವಸ್ಥೆ ಇದೆ. ಇದು ಒಂದು ದೊಡ್ಡ ಅಸಹ್ಯ!

ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳಾದ ಶ್ರೀ ಸಿದ್ದವೀರಪ್ಪನವರ ಗಮನಕ್ಕೆ ತರಬೇಕಾಗಿದೆ. ಟ್ರ್ಯಾಫಿಕ್ ಪೋಲೀಸ್‌ನವರ ಪೈಕಿ 3-4 ಜನ ಆಂಗ್ಲೋ ಇಂಡಿಯನ್ಸ್ ಇದ್ದಾರೆ. ಅವರಿಗೆ ಬೇರೆ ಏನೂ ಕೆಲಸವೇ ಇಲ್ಲ. ಲಕ್ಷಣವಾಗಿ ಬಟ್ಟೆ ಹಾಕಿಕೊಂಡು ಮೆಜೆಸ್ಟಿಕ್ ಸರ್ಕಲ್, ಅಲ್ಲಿ ಇಲ್ಲಿ ತಿರುಗಾಡುತ್ತಿರುವುದು, ಸಾಯಂಕಾಲ ಆದಕೂಡಲೇ ಬೆಂಗಳೂರಿಗೆ ಹೊರಗಡೆಯಿಂದ ಲಾರಿಗಳು ಎಲ್ಲಿ ಬರುತ್ತವೆಯೋ ಅಲ್ಲಿ ಕಾದುಕೊಂಡಿದ್ದು ಅವತ್ತಿನ ದಿವಸ ಕುಡಿಯುವುದಕ್ಕೆ ಎಷ್ಟು ಬೇಕೋ ಅಷ್ಟು ದುಡ್ಡುಮಾಡಿಕೊಳ್ಳುವುದು ಇದೇ ಕೆಲಸ. ಮದರಾಸ್ ಸ್ಟೇಟ್‌ನಿಂದ, ಬೊಂಬಾಯಿ ಸ್ಟೇಟ್‌ನಿಂದ ಅನೇಕ ಲಾರಿಗಳು ಬರುತ್ತವೆ. ಅವುಗಳಲ್ಲಿ ಏನೇ ನ್ಯೂನತೆಗಳಿದ್ದರೂ ಅವನ್ನು ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ. ಇದಕ್ಕೆಲ್ಲಾ ಕಾರಣ regular ಮಾಮೂಲು ಇರುತ್ತದೆ. ಇದು ಟ್ರ್ಯಾಫಿಕ್ ಪೋಲೀಸ್‌ನವರಿಗೆ ಮರ್ಯಾದೆ ತರತಕ್ಕ ವಿಷಯವಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದಾದರೂ ಪೋಲೀಸ್‌ನವರಲ್ಲಿರಬೇಕಾದ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಪೋಲೀಸ್ ಇಲಾಖೆಯ ವಿಚಾರದಲ್ಲಿ ಎಷ್ಟೇ ಹೇಳಿದರೂ ಕೂಡ, ಪರವಾಗಿ ಮತ್ತು ವಿರೋಧವಾಗಿ ಎರಡು ಕಡೆಯೂ ಹೇಳತಕ್ಕ ವಿಚಾರ ಇದ್ದೇ ಇದೆ. ಒಂದು ಸರ್ಕಾರ ಬದಲಾವಣೆಯಾಗಿ, ಒಂದು ಹೊಸ ಸರ್ಕಾರದ ನೀತಿ ಬಂದ ಮೇಲೆ ಪೋಲೀಸ್‌ನವರೂ ಕೂಡ ಒಂದು ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಹೇಳಿ ಸಾರ್ವಜನಿಕರು ಅಪೇಕ್ಷಿಸುವುದು ಸರಿ. ಆದರೆ ಈ ಪೋಲೀಸ್‌ನವರು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಎಂದು ಹೇಳಿ ಆಗಿಂದಾಗ್ಯೆ ಸರ್ಕಾರದವರ ಗಮನಕ್ಕೆ ತರುವುದು ನಮ್ಮ ಕರ್ತವ್ಯವೇ ಆದರೂ ಕೂಡ ಸಾರ್ವಜನಿಕರೂ ಸಹ ಪೋಲೀಸಿನವರೊಂದಿಗೆ ಸಹಕರಿಸಿ ಕೆಲಸ ಮಾಡಬೇಕೆಂಬುದನ್ನು ನಾವು ಮರೆಯಬಾರದು. ಇದನ್ನು ಹೇಳುವುದರ ಉದ್ದೇಶವೇನೆಂದರೆ ನಾವು ಎಷ್ಟರಮಟ್ಟಿಗೆ ವಿಜಿಲೆಂಟಾಗಿ ಪೋಲೀಸ್‌ನವರಿಗೆ ಬೆಂಬಲ ಕೊಡುತ್ತೇವೆಯೋ ಅಷ್ಟರಮಟ್ಟಿಗೆ ನಾವು ನಿರೀಕ್ಷಿಸುವಷ್ಟು ಕೆಲಸವನ್ನು ಅವರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಪೋಲೀಸ್‌ನವರು ಚೆನ್ನಾಗಿ ಕೆಲಸ ಮಾಡುವ ರೀತಿಯಲ್ಲಿ ಆಗಬೇಕಾದರೆ ಅವರು ತಕ್ಷಣ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ತಕ್ಕ ಸೌಕರ್ಯ ಮಾಡಿಕೊಡಬೇಕು. ಇಲ್ಲದೇ ಇದ್ದರೆ ಯಾವ ಕೇಸನ್ನೇ ಆಗಲಿ ಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿ ಅನೇಕ ಸಂದರ್ಭಗಳಲ್ಲಿ ಅವರಿಗೆ ಇರತಕ್ಕ ಕೊರತೆಗಳನ್ನು ಸರ್ಕಾರದವರಿಗೆ ತಿಳಿಸಿದ್ದೇನೆ. ತಾಲ್ಲೂಕ್ ಲೆವಲ್‌ನಲ್ಲಿ ಆಗತಕ್ಕ ತಕ್ಸೀರುಗಳನ್ನು ಜಾಗ್ರತೆ ತನಿಖೆ ಮಾಡಬೇಕೆಂದರೆ ಅವರಿಗೆ ಒಂದು ಬೈಸಿಕಲ್ಲೂ ಕೂಡ ಇರುವುದಿಲ್ಲ. ಅವರು ಸ್ಥಳದ ಬಸ್ಸಿನಲ್ಲೋ, ಕುದುರೆ ಗಾಡಿಯಲ್ಲೋ ಕೊನೆಗೆ ನಡೆದುಕೊಂಡೋ ಆ ಸ್ಥಳಕ್ಕೆ ಹೋಗುವುದರೊಳಗೆ ಅಲ್ಲಿ ಏನಾಯಿತು ಎನ್ನುವುದೇ ಪತ್ತೆ ಹಚ್ಚುವುದಕ್ಕೆ ಕಷ್ಟವಾಗುತ್ತದೆ. ಈಗ ತಾವು ಈ ಆಡಳಿತಕ್ಕಾಗಿಯೂ ಎಷ್ಟೋ ಖರ್ಚು ಮಾಡುತ್ತಾ ಇದ್ದೀರಿ. ಪ್ರತಿಯೊಂದು ಪೋಲೀಸ್ ಸ್ಟೇಷನ್ನಲ್ಲೂ ಕೂಡ ಕನಿಷ್ಟ ಪಕ್ಷ ಒಂದು ಬೈಸಿಕಲ್ ಇರುವಹಾಗೆ ವ್ಯವಸ್ಥೆ ಮಾಡಿದ್ದೇ ಆದರೆ ಅವರ ಕೆಲಸ ಕಾರ್ಯಗಳಿಗೆ ಬಹಳ ಅನುಕೂಲವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಈ ಪೋಲೀಸ್ ಇಲಾಖೆಯಲ್ಲಿ ಇರತಕ್ಕವರು ಬಹಳ ದಕ್ಷತೆ ಮತ್ತು ಗೌರವದಿಂದ ಕೆಲಸ ಮಾಡುವವರು. ಕೆಲವು ಅಧಿಕಾರಿಗಳು ಮೇಲಿನ ಅಧಿಕಾರಿಗಳಿಗೆ ಹೊಂದಿಕೊಂಡು ಹಳ್ಳಿಗಳನ್ನೇ ಕಾಣದ ಜನ ಕೆಲವರಿದ್ದಾರೆ. ಅವರಿಗೆ ಎಷ್ಟೋ ವೇಳೆ ಶಹಬಾಸ್‌ಗಿರಿ ಸಿಕ್ಕಿ, ಚೆನ್ನಾಗಿ ಕೆಲಸ ಮಾಡುವ ಜನ ಇನ್ನಿತರರು ಯಾರಿದ್ದಾರೋ ಅವರ ಮನಸ್ಸಿಗೆ ಬೇಜಾರಾಗಿ ಈ ಇಲಾಖೆಗೆ ಏಕೆ ಬಂದು ಸೇರಿಕೊಂಡೆವೋ ಎಂದು ನೊಂದುಕೊಂಡಿರುವವರು ಪೋಲೀಸ್ ಇಲಾಖೆಯಲ್ಲಿ ಇದ್ದಾರೆ. ಈಗ ಪೋಲೀಸ್ ಖಾತೆಯಿರತಕ್ಕ ಹೋಂ ಮಿನಿಸ್ಟರ್‌ರವರಿಗೆ he has a very shrewd common sense, ಯಾರುಯಾರು ಚೆನ್ನಾಗಿ ಕೆಲಸ

ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳುವ ಶಕ್ತಿ ಅವರಲ್ಲಿದೆ. ಈ ವಿಚಾರಕ್ಕೆ ಹೆಚ್ಚು ಗಮನ ಕೊಟ್ಟು ಚೆನ್ನಾಗಿ ಕೆಲಸ ಮಾಡುವವರಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಇತ್ತೀಚೆಗೆ ನಮ್ಮ ಈ ಪೋಲೀಸ್‌ನವರಲ್ಲಿ ಒಂದು ವರ್ತನೆ ಬಹಳ ಹೆಚ್ಚಾಗಿ ಕಂಡುಬರುತ್ತ ಇದೆ. ಬಸ್‌ಸ್ಟ್ಯಾಂಡುಗಳಲ್ಲಿ, ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಕೆಲವು ನೋಟೀಸ್‌ಗಳನ್ನು ಹಾಕಿರುತ್ತಾರೆ. ಆ ನೋಟೀಸ್‌ಗಳಿಗೆ ಮೊದಲು ವ್ಯತಿರಿಕ್ತವಾಗಿ ನಡೆಯುವವರು ಎಂದರೆ ಈ ಪೋಲೀಸ್‌ನವರು. ಅಷ್ಟೇ ಅಲ್ಲದೆ ಯಾರಾದರೂ ಕೆಲವರು ಯಾವುದಾದರೂ ಒಂದು ವಿಷಯವನ್ನು ಆಸಕ್ತಿಯಿಂದ ಮಾತನಾಡುತ್ತ ಇದ್ದರೆ ಅವರೂ ಕೂಡ ಮಧ್ಯೆ ಬಾಯಿಹಾಕಿ ಮಾತನಾಡುವುದನ್ನು ನೋಡಿದ್ದೇವೆ. ತಾಲ್ಲೂಕು ಕಚೇರಿಗಳಲ್ಲಿ ಈ ಪೋಲೀಸ್‌ನವರು ಸುಖವಾಗಿ ಕಾಲು ಚಾಚಿಕೊಂಡು ಬೀಡಿ ಸೇದುತ್ತಾ ಕುಳಿತುಕೊಂಡಿರುತ್ತಾರೆ. ಈ ರೀತಿಯಲ್ಲಿ ವರ್ತಿಸಿ ಕಾಕಿ ಬಟ್ಟೆಗೆ ಸಾರ್ವಜನಿಕರ ಮನಸ್ಸಿನಲ್ಲಿ ಯಾವಭಯವಿದೆಯೋ ಅದನ್ನು ಸಡಿಲ ಮಾಡುತ್ತಾ ಇದ್ದಾರೆ, ಮತ್ತು ಅದರಿಂದ ಸಾರ್ವಜನಿಕರಲ್ಲಿ ಪೋಲೀಸ್‌ನವರ ಮೇಲೆ ಯಾವ ಒಂದು ಗೌರವವಿರಬೇಕೋ ಅದು ಮಾಯವಾಗುವುದಕ್ಕೆ ಕಾರಣವಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಅವರಿಗೆ ಸರಿಯಾದ ಎಚ್ಚರಿಕೆ ಕೊಡಬೇಕು.

ಕೆಲವು ಕೇಸುಗಳನ್ನು ಹಿಡಿಯುವ ವಿಚಾರದಲ್ಲಿ ಸಾರ್ವಜನಿಕಾಭಿಪ್ರಾಯ ಪದೇ ಪದೇ ಬರುತ್ತಿದೆ. ನಮ್ಮ ನೆಲಮಂಗಲ ತಾಲ್ಲೂಕಿನಲ್ಲಿ ಒಂದು ಕೇಸು ಆಯಿತು. ಎವಿಡೆನ್ಸ್ ಏನೋ ಅಲ್ಪ ಸ್ವಲ್ಪ ಪತ್ತೆ ಮಾಡಿದರು, ಕೊನೆಗೆ ಅಂತಹ ಘಟನೆ ನಡೆಯಲೇ ಇಲ್ಲ ಎಂಬುದಾಗಿ ವರದಿ ಮಾಡಿದರು ಎಂದು ಅಲ್ಲಿನ ಜನಗಳು ಹೇಳುತ್ತಾರೆ. ಆ ಸಂದರ್ಭದಲ್ಲಿ ಅಲ್ಲಿನ ಪೋಲೀಸ್ ಇನ್ಸ್ಪೆಕ್ಟರು ಕೊಂಚ ದಿವಸ ರಜದ ಮೇಲೆ ಹೋದರು. ಅದಕ್ಕೆ ಜನಗಳು ಏನೋ ಸಂಭಾವನೆ ಸಿಕ್ಕಿತು ಎಂದು ಕಾಣುತ್ತದೆ ಅದಕ್ಕೇ ರಜದ ಮೇಲೆ ಹೋದರು ಎಂದು ಆಡಿಕೊಳ್ಳುತ್ತಿದ್ದರು. ಇಂಥಾದ್ದಕ್ಕೆಲ್ಲಾ ಅವಕಾಶ ಕೊಡದಂತೆ ಯಾರಾದರೂ ದೂರು ಕೊಟ್ಟಾಗ ತನಿಖೆ ಮಾಡುವ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಎವಿಡೆನ್ಸ್‌ನ್ನು ಅಲ್ಲಿರತಕ್ಕ ಎಂ.ಎಲ್.ಎ. ಗಳು ಮುಂತಾದವರ ಎದುರಿನಲ್ಲಿ ತೆಗೆದುಕೊಂಡದ್ದೇ ಆದರೆ ಅಂಥ ಆಕ್ಷೇಪಣೆಗೆ ಅವಕಾಶವಿರುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ.

ಇನ್ನು ಈ ಪ್ರಾಣಿವಧೆ ವಿಚಾರದಲ್ಲಿ ಪೋಲೀಸ್‌ನವರು ಸಾಮೀಲಾಗುತ್ತಾರೆ ಎಂದು ಮಾನ್ಯ ಮಿತ್ರರು ಹೇಳಿದರು. ಸತ್ಯಾಂಶವೇನೆಂದರೆ ಜಾತ್ರೆಗಳನ್ನು ಮಾಡುವಾಗ ಪ್ರಾಣಿ ಬಲಿ ಕೊಡುವುದನ್ನು ಯಾರೂ ವಿರೋಧಿಸುವುದಿಲ್ಲ. ಪೋಲೀಸ್‌ನವರಿಗೆ ದೂರು ಕೊಡಿ ಎಂದರೆ ಯಾರೂ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಅಕಸ್ಮಾತ್ ಯಾರಾದರೂ ಒಬ್ಬರು ದೂರು ಕೊಟ್ಟರೆ ಅವನು ಆ ಗ್ರಾಮದಲ್ಲಿ ಉಳಿಯುವುದೇ ಕಷ್ಟವಾಗುತ್ತದೆ. ಮುಂಚಿತವಾಗಿ ಎಚ್ಚರಿಕೆ ಕೊಟ್ಟರೂ ಕೂಡ ಈ ಪಾಶವೀ ಕೃತ್ಯವನ್ನು ಆ ಜನರು ಮಾಡುತ್ತಾರೆ. ಅದಕ್ಕೆ ಬಂದೋಬಸ್ತು ಮಾಡಬೇಕಾದದ್ದು ಸರ್ಕಾರದವರ ಕರ್ತವ್ಯ ಎಂದು ಹೇಳುತ್ತೇನೆ.

ಇನ್ನು ಪೋಲೀಸ್ ಕಾನ್ಸ್ಟೇಬಲ್‌ಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಗ್ರಾಮಾಂತರಗಳಲ್ಲಿ ರಾತ್ರಿ ಹೊತ್ತು ಚಾವಡಿಯಲ್ಲಿ ಮಲಗುವ ಪದ್ಧತಿ ಇದೆ. ಪೋಲೀಸ್ ಕಾನ್ಸ್ಟೇಬಲ್ ಬಂದು ಚೆಕ್ ಮಾಡುತ್ತಾನೆ. ಯಾವುದಾದರೂ ಒಬ್ಬ ಆಸಾಮಿಯನ್ನು ಬುಕ್ ಮಾಡಬೇಕೆಂದು ಅವನಿಗೂ ಆ ಗ್ರಾಮಾಧಿಕಾರಿಗಳಿಗೂ ಒಂದು, understanding ಇದ್ದರೆ ಅವನನ್ನು ಬುಕ್‌ಮಾಡಿ ಅವನ ಮೇಲೆ ಕೇಸು ಅಂಟಿಸತಕ್ಕ ಪದ್ಧತಿ ಇದೆ. ಈ ರೀತಿ ಆಗದಂತೆ ತಕ್ಕ ಬಂದೋಬಸ್ತು ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

Mr. **SPEAKER**.—The House will now rise and meet at 3-30 P.M.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair]

*ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ಪೋಲೀಸು ಅಧಿಕಾರಿಗಳ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ, ಅವರಿಗೆ ಕೊಡತಕ್ಕ ಸಂಬಳ ಬಹಳ ಕಡಿಮೆ. ‘‘ನಮಗೆ 23 ರೂಪಾಯಿ ಸಂಬಳ ಕೊಡುತ್ತಾರೆ, ನಮ್ಮ ಜೀವನ ಬಹಳ ಕಷ್ಟ. ನಮಗೆ ಎಂಟು ಹತ್ತು ಜನ ಮಕ್ಕಳಿದ್ದಾರೆ. ಹೆಚ್ಚಿನಸಂಬಳ ಕೊಡಿಸಿದರೆ, ನಾವೂ ತೃಪ್ತರಾಗಿ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ’’ ಎಂದು ಹೇಳಿದ್ದಾರೆ. ಪೋಲೀಸು ಇಲಾಖೆಯಲ್ಲಿ ಕಾನ್ಸ್ಟೇಬಲುಗಳಿಗೆ, ದಫೇದಾರರುಗಳಿಗೆ ಮತ್ತು ಜಮೇದಾರರುಗಳಿಗೆ ಸಂಬಳ ಬಹಳ ಕಡಿಮೆ. ಸಬ್‌ಇನ್ಸ್ಪೆಕ್ಟರ ಮೇಲ್ಪಟ್ಟವರಿಗೆ ಗ್ರೇಡು ಹೆಚ್ಚಾಗಿದೆ. ಕಡಿಮೆ ದರ್ಜೆಯ ನೌಕರರಿಗೆ ಹೆಚ್ಚು ಸಂಬಳ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಕಳ್ಳಭಟ್ಟಿ ಸಾರಾಯಿ ತಯಾರುಮಾಡುವ ಕಡೆಗಳಲ್ಲಿ ಅಂಥವರನ್ನು ಹಿಡಿಯಲು ಪೋಲೀಸಿನವರು ಹೋಗುತ್ತಾರೆ. ಅವರಿಗೆ ಸಾಕಾದಷ್ಟು ಸಹಾಯವಿಲ್ಲ, ಕುಮ್ಮಕ್ಕು ಇಲ್ಲ. ಅವರಿಗೆ ಸಾಕಾದಷ್ಟು ಕುಮ್ಮಕ್ಕು ಕೊಟ್ಟಪಕ್ಷದಲ್ಲಿ ಪಾನನಿರೋಧ ಕೆಲಸ ಯಶಸ್ವಿಯಾಗಿ ನಡೆಯುತ್ತದೆ ಎಂದು ಸಲಹೆಮಾಡುತ್ತೇನೆ.

ಪೋಲೀಸಿನವರು ಕೆಲವು ಕಡೆ ಗ್ರಾಮಾಧಿಕಾರಿಗಳ ಕೈಯಲ್ಲಿ ಸಿಕ್ಕಿಕೊಂಡಿದ್ದಾರೆ. ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆ. ಪೋಲೀಸಿನವರು ಹಳ್ಳಿಗಳಿಗೆ ಹೋದಾಗ ರಾತ್ರಿಕಾಲದಲ್ಲಿ ಚಾವಡಿ ಕಾವಲು ಹಾಕುತ್ತಾರೆ. ಆ ಚಾವಡಿ ಕಾವಲಿನಲ್ಲಿ ಸರದಿ ಕಾಯುವಾಗ ಕೆಲವು ಲೋಪಗಳಿವೆ. ಇದನ್ನು ಕ್ರಮಪಡಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಕೆಲವು ಕಾನೂನುಗಳನ್ನು ಮಾಡಿದ್ದಾರೆ. ಅವುಗಳನ್ನು ಜಾರಿಗೆ ಕೊಡುವಾಗ ಪೋಲೀಸು ಅಧಿಕಾರಿಗಳಿಗೆ ತಾವು ಸರಿಯಾಗಿ ತಿಳುವಳಿಕೆ ಕೊಡಬೇಕು. ಇಲಾಖಾ ಮುಖ್ಯಾಧಿಕಾರಿಗಳನ್ನು ಮತ್ತು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರು ವಗೈರೆಯವರನ್ನು ಕಂಡು ಸ್ವಲ್ಪ ಆಡಳಿತದಲ್ಲಿ ಬಿಗಿ ಇರಬೇಕು, ದಕ್ಷತೆ ಇರಬೇಕು, ಧೈರ್ಯವಿರಬೇಕು ಮತ್ತು ಆಡಳಿತ ವರ್ಗದಲ್ಲಿ ಕೈ, ಬಾಯಿ, ಶುದ್ಧವಿರಬೇಕು ಎಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಮುಖ್ಯವಾಗಿ ಪಬ್ಲಿಕ್ ಹೆಲ್ತ್,

(ಶ್ರೀ ಸಿ. ಟಿ. ಹನುಮಂತಯ್ಯ).

ಆಕ್ಟ್‌ನಲ್ಲಿ 108 ಮತ್ತು 110ನೆ ಸೆಕ್ಷನ್, ಇಂಡಿಯನ್ ಪೀನಲ್ ಕೋಡಿನ 372ನೆ ಸೆಕ್ಷನ್, Social and Civil Disabilities Act ಮತ್ತು Removal of Untouchability Act ಇವುಗಳನ್ನು ಜಾರಿಗೆ ಕೊಟ್ಟರೆ ಕ್ಷೇಮ, ಮತ್ತು ಅಸ್ಪೃಶ್ಯತೆಯ ನಿವಾರಣೆ ಯಾಗುತ್ತದೆ. ಆದುದರಿಂದ ಇವುಗಳನ್ನು ಜಾರಿಗೆ ಕೊಟ್ಟು ಸಹಾಯ ಮಾಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ಮಾರಿ ಜಾತ್ರೆಗಳನ್ನು ಮಾಡಕೂಡದೆಂದು ಗೊತ್ತಿದ್ದರೂ ಸಹ ಎಲ್ಲೆಲ್ಲೂ ಈ ಜಾತ್ರೆಗಳು ನಡೆಯು ತ್ತಿವೆ. ಕೆಲವು ಗ್ರಾಮಗಳಲ್ಲಿ ಗ್ರಾಮಸ್ಥರೂ ಮತ್ತು ಪಟೇಲರೂ ಸೇರಿಕೊಂಡು ಪೋಲೀಸಿನವರಿದ್ದರೆ ಚೆನ್ನಾಗಿರುವುದಿಲ್ಲವೆಂದು ಅವರನ್ನು ನಾವು ಇಲ್ಲಿ ಇರುವುದು ಬೇಡ, ಕಾಫಿ ತಿಂಡಿಗೆ ಹೋಗೋಣ ಬನ್ನಿ ಎಂದು ಕರೆದುಕೊಂಡು ಹೋಗುತ್ತಾರೆ. ಅನಂತರ ಜಾತ್ರೆಗಳಲ್ಲಿ ಕುರಿಕೋಣ ಕಡಿಯುತ್ತಾರೆ. ಆರೀತಿ ದಾಕ್ಷಿಣ್ಯಗಳಿಗೆ ಒಳಗಾಗದೆ, ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಬೇಕು. ದೇವರ ಹೆಸರಿನಲ್ಲೇ ಆಗಲಿ, ಯಾವ ಕಾರಣದಿಂದಲೇ ಆಗಲಿ ಪ್ರಾಣಿವಧೆ ಮಾಡಕೂಡದು ಎಂದು ಕಾನೂನು ಮಾಡಿದ್ದೀರಿ. ಇದನ್ನು ಜಾರಿಗೆ ಕೊಡುವಂತೆ ಮಾಡಬೇಕು ಮತ್ತು ದೇಶದ ಎಲ್ಲ ಕಡೆ ಗಳಲ್ಲಿಯೂ ಕೂಡಲೇ ಜಾರಿಗೆ ಬರುವಂತೆ ಮಾಡಿಸಿ ಕೊಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ-ಅನುಸೂಚಿತ ಜಾತಿಗಳು).—ಸ್ವಾಮಿ, ಪೋಲೀಸು ಇಲಾಖೆಯ ದಕ್ಷತೆ ಕಡಿಮೆಯಾಗಿದೆ ಎಂದು ಹೇಳುವವ ರಲ್ಲಿ ನಾನೂ ಒಬ್ಬ. ಇದರ ಬಗ್ಗೆ ಕೆಲವು ವಿಚಾರ ಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಪೋಲೀಸು ಅಧಿಕಾರಿಗಳು ಸರಿ ಯಾಗಿ ಕೆಲಸ ಮಾಡುತ್ತಿಲ್ಲವೆನ್ನುವುದಕ್ಕೆ ಕೆಲವು ಉದಾ ಹರಣೆಗಳನ್ನು ಕೊಡುತ್ತೇನೆ. ಚಿಕ್ಕಬಳ್ಳಾಪುರದಲ್ಲಿ ಒಬ್ಬ ಪೋಲೀಸಿನವನು ಕಳ್ಳಭಟ್ಟಿ ಸಾರಾಯಿ ಮಾಡು ತ್ತಿದ್ದು, ಪೋಲೀಸ್ ಇನ್ಸ್‌ಪೆಕ್ಟರ ಕೈಗೆ ಸಿಕ್ಕಿ ಬಿದ್ದ. ಆತನು ಪುನಃ ಅಲ್ಲಿಯೇ ಡ್ಯೂಟಿ ಮೇಲಿದ್ದಾನೆ. ಇದನ್ನು ನೋಡಿದರೆ ಪೋಲೀಸ್ ಅಧಿಕಾರಿಗಳ ದಕ್ಷತೆ ಎಷ್ಟು ಎನ್ನುವುದು ಗೊತ್ತಾಗುತ್ತದೆ. ಆಮೇಲೆ ಪೋಲೀಸ್ ಅಧಿಕಾರಿಗಳು ಭಟ್ಟಿಸಾರಾಯಿ ಏಜಂಟರ ಹತ್ತಿರ ಹೋಗಿ ಬೆಳಿಗ್ಗೆ ಇಂಥಿಂಥವರನ್ನು ಪ್ರೊಹಿಬಿಷನ್ ಡ್ಯೂಟಿಗೆ ಹಾಕಿದ್ದಾರೆ ಎಂದು ಹೇಳಿಬರುತ್ತಾರೆ. ಈ ಡ್ಯೂಟಿಗೆ ಹಾಕಿರುವ ಪೋಲೀಸು ಕಾನ್ಸ್‌ಟೇಬಲುಗಳಿಗೆ ಪ್ರತಿಯೊಬ್ಬರಿಗೂ 5 ರೂಪಾಯಿ, 10 ರೂಪಾಯಿ ಹೀಗೆ ಮಾಮೂಲು ಕೊಡುತ್ತಾರೆ. ರಾತ್ರಿ ಕೆಹೊತ್ತು ಭಟ್ಟಿ ಸಾರಾಯಿಯನ್ನು ಬೇರೆಯವರು ತಂದರೆ ಪೋಲೀಸಿನವರು ಹಿಡಿದುಕೊಳ್ಳುತ್ತಾರೆನ್ನುವ ಉದ್ದೇಶ ದಿಂದ, ಪೋಲೀಸ್ ಅಧಿಕಾರವನ್ನೇ ಉಪಯೋಗಿಸಿ ಕೊಂಡು, ಕೆಲಸ ಮಾಡುತ್ತಿದ್ದಾರೆ. ಪೋಲೀಸಿನವರೇ ಈ ಸಾರಾಯಿಯನ್ನು ತಂದು ಏಜಂಟರಿಗೆ ಸಪ್ಲೈ ಮಾಡುತ್ತಿರುವುದು ಚಿಕ್ಕಬಳ್ಳಾಪುರದಲ್ಲಿ ನಡೆಯುತ್ತಿದೆ. ಈ ವಿಚಾರದಲ್ಲಿ ಮಾನ್ಯಮಂತ್ರಿಗಳಾದ ಚನ್ನಯ್ಯ ನವರಿಗೂ ಮತ್ತು ಗೃಹಮಂತ್ರಿಗಳಿಗೂ ಎಷ್ಟೋ ಸಲ ತಿಳಿಸಿದ್ದೇನೆ. ಆದರೆ ಅವರು ಏನೂ ಕಾರ್ಯಕ್ರಮ ವನ್ನು ತೆಗೆದುಕೊಂಡಹಾಗೆ ಕಾಣುವುದಿಲ್ಲ. ಬಂದ ಹಣದಲ್ಲಿ ಪೋಲೀಸ್ ಇನ್ಸ್‌ಪೆಕ್ಟರು, ಸಬ್ ಇನ್ಸ್‌ಪೆಕ್ಟ ರಾದಿಯಾಗಿ ಎಲ್ಲರೂ ಹಂಚಿಕೊಳ್ಳುತ್ತಾರೆ. ಇಂಥ ದನ್ನೆಲ್ಲ ತಡೆಗಟ್ಟಲು ಸರ್ಕಾರದವರು ಸರಿಯಾದ ವ್ಯವಸ್ಥೆ ಮಾಡದೆ ಇದ್ದರೆ, ನಾಗರಿಕರಾದ ಪ್ರತಿಯೊಬ್ಬ ಪ್ರಜೆಯೂ ಓಡಾಡುವುದಕ್ಕೇ ಬಹಳ ಕಷ್ಟವಾಗುತ್ತದೆ.

ಸ್ವಾತಂತ್ರ್ಯ ಬಂದಿದೆ. ಸ್ವಾತಂತ್ರ್ಯ ಬಂದಮೇಲೆ ಪ್ರತಿಯೊಬ್ಬರಿಗೂ ಸಮಾನವಾದ ಹಕ್ಕುಗಳು ಬರ ಬೇಕೆಂದು ಹೇಳುತ್ತಿದ್ದೇವೆ. ಆದರೆ ಶಿಡ್ಲಘಟ್ಟ ತಾಲ್ಲೂಕು ಶೀಗೇಹಳ್ಳಿ ಎಂಬ ಗ್ರಾಮದಲ್ಲಿ ಹರಿಜನ ಹೆಂಗಸರು ಹೂವು ಮುಡಿಯುವುದಕ್ಕೆ ಸ್ವಾತಂತ್ರ್ಯ ಬಂದಿಲ್ಲ. ಇದನ್ನು ಗೃಹಮಂತ್ರಿಗಳಿಗೂ ಮತ್ತು ಪೋಲೀಸ್ ಅಧಿಕಾರಿಗಳಿಗೂ ಎಷ್ಟೋಸಲ ಈಗ ನಾಲ್ಕು ವರ್ಷಗಳಿಂದ ತಿಳಿಸಿದ್ದೇನೆ. ಒಂದು ಊರಿನ ಒಬ್ಬ ಹರಿಜನ ಹೆಂಗಸು ಹೂವು ಮುಡಿಯುವುದಕ್ಕೆ ಸ್ವಾತಂತ್ರ್ಯವಿಲ್ಲವಲ್ಲ ಎನ್ನುವ ವಿಷಯದಲ್ಲಿ ಸರ್ಕಾ ರಕ್ಕೆ ಸುಮಾರು 25 ಅರ್ಜಿಗಳನ್ನು ನಾನೇ ಕೊಟ್ಟಿ ದ್ದೇನೆ. ಶಿಡ್ಲಘಟ್ಟದ ಇನ್ಸ್‌ಪೆಕ್ಟರವರು ಯಾರ ದಾದರೂ ಪ್ರಾಣಹೋಗಲಿ ಆಗಬಂದು ವಿಚಾರಿ ಸುತ್ತೇವೆಂದು ಜವಾಬು ಕೊಡುತ್ತಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಈವಾಗ ಆರೀತಿ ಹೂವು ಮುಡಿಯುವುದಕ್ಕೆ ಪ್ರತಿಬಂಧಕವಿರುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಕಾನೂನುಗಳಾಗಿವೆ. ಆದರೆ ಅವೆಲ್ಲ ಕಡತದಲ್ಲಿ ಸೇರಿವೆಯೇ ಹೊರತು ಕಾರ್ಯ ಗತವಾಗಿಲ್ಲ. ಆದುದರಿಂದ ಕಾನೂನನ್ನು ಜಾರಿಗೆ ಕೊಟ್ಟು ಹರಿಜನರಿಗೆ ದೊರಕಬೇಕಾದ ಸೌಲಭ್ಯ ಗಳನ್ನೆಲ್ಲ ದೊರಕಿಸಿ ಕೊಡಬೇಕು ಎಂದು ತಮ್ಮ ಗಮ ನಕ್ಕೆ ತರುತ್ತಿದ್ದೇನೆ. ಸಿವಿಲ್ ಸ್ವಭಾವದ ಅನರ್ಹತೆ ಗಳ ಆಕ್ಟ್ ದೇಶದಲ್ಲಿ ಜಾರಿಯಲ್ಲಿದೆ. ಅದನ್ನು ಕಾರ್ಯಗತಮಾಡುವುದು ಸರ್ಕಾರದ ಕೈಯಲ್ಲಿದೆ. ಆದುದರಿಂದ ಎಲ್ಲಿ ತೊಂದರೆಗಳಿವೆಯೋ ಅವು . . . .

ಶ್ರೀ ಎಚ್. ಸಿದ್ಧವೀರಪ್ಪ.—ಪೋಲೀಸಿನವರು ಏನು ಮಾಡಬೇಕು ಎಂದು ಹೇಳುತ್ತೀರಿ ?

ಶ್ರೀ ಎ. ಮುನಿಯಪ್ಪ.—ತಾವು ಒಂದು ಕಾನೂನು ಮಾಡಿದ್ದೀರಿ. ಅದಕ್ಕೆ ವಿರೋಧವಾಗಿ ನಡೆದರೆ ಅಂಥವರನ್ನು ಹಿಡಿದು ಪೋಲೀಸ್ ಅದಕ್ಕೆ ತಕ್ಕ ಬಂದೋಬಸ್ತು ಮಾಡಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ಮಾಡಿ ಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರದಲ್ಲಿ ವೆಂಕಟಪ್ಪ ಎಂಬವನನ್ನು ಅರ್ಧ ಕ್ಷೌರಮಾಡಿ ಹರಿ ಜನನೆಂಬ ಕಾರಣಕ್ಕಾಗಿ ಓಡಿಸಿದರು. ಕುಂದಲಗುರ್ಕಿ ಗ್ರಾಮದಲ್ಲಿ ಹರಿಜನರ ಮದುವೆ ಆದರೆ ಆ ಊರಿ ನಲ್ಲಿ ಹುಟ್ಟಿದಾಗಿನಿಂದಲೂ ಹೂವು ಮುಡಿಯುವುದು ಇಲ್ಲವೇ ಇಲ್ಲವೆಂದು ಹೇಳುತ್ತಿದ್ದಾರೆ. ಘಂಟಾಘೋಷ ವಾಗಿ ಮದುವೆ ಮಾಡಬೇಕಾದರೆ ಆ ಊರಿಗೆ ಹೂವು ತೆಗೆದುಕೊಂಡು ಹೋಗಕೂಡದು. ಇಂಥ ತೊಂದರೆ ಗಳು ಇವೆ. ಇಂಥ ವಿಚಾರಗಳು ಎಷ್ಟೋ ಇವೆ. ಇನ್ನೊಂದು ವಿಷಯ. ಚಿಕ್ಕಬಳ್ಳಾಪುರದಲ್ಲಿ ತಾಳೂಳ್ಳಿ ನಾರಾಯಣಪ್ಪನವರ ಮನೆಯಲ್ಲಿ ಒಬ್ಬ ಹೆಣ್ಣು ಹುಡುಗಿ ಪತ್ತೆ ಇಲ್ಲದೆ ಆಗಿ ಒಂಭತ್ತು ತಿಂಗಳಾಯಿತು. ಪೋಲೀಸಿನವರು ಮೊದಮೊದಲು ಬಹಳ ಬಿರುಸಿ ನಿಂದ, ಕೆಲಸ ಕಾರ್ಯಗಳನ್ನು ಬಹಳ ಮುತುವರ್ಜಿ ಯಿಂದ ಮಾಡಿದರು. ವಿಚಾರಣೆ ವಗ್ಯೆರೆ ಮಾಡಿದರು. ಆದರೆ ಆ ಹುಡುಗಿ ಏನಾಯಿತೋ ಅವರ ಮನೆ ಯವರು ಮತ್ತು ಸಂಬಂಧಪಟ್ಟವರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡರೋ ಗೊತ್ತಿಲ್ಲ. ಆ ಕೇಸು ಸಹ ಪತ್ತೆ ಇಲ್ಲದೆ ಆಗಿದೆಯೆಂದು ತಿಳಿಯುತ್ತೇನೆ. ಆ ಹುಡುಗಿಯ ಗಂಡನಾದವನು ನನ್ನ ಹೆಂಡತಿ ಪತ್ತೆ

ಇಲ್ಲವೆಂದೂ, ಆಕೆ ಇಂಥ ಕಡೆ ಇದ್ದಾಳೆಂದು ತಿಳಿದು ಬಂದಿದೆ ಎಂದೂ ಅರ್ಜಿಕೊಟ್ಟರೆ ಒಬ್ಬ ಪೋಲೀಸು ಅಧಿಕಾರಿಯೂ ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಊರಿನಲ್ಲಿ ಒಬ್ಬರೊಬ್ಬರಿಗೆ ಆಗದೆ ಇದ್ದ ಮನೆಯಲ್ಲಿ ಜಗಳವಾಗಿ, ಹುಡುಗಿಯನ್ನು ಪತ್ತೆ ಇಲ್ಲದೆ ಮಾಡುವುದಕ್ಕೋಸ್ಕರ ಇದು ನಡೆದಿದೆ. ಈ ವಿಷಯದಲ್ಲಿ ಸರಿಯಾಗಿ ವಿಚಾರಣೆ ನಡೆಸಿ ಆ ಹುಡುಗಿ ಪ್ರಾಣದಿಂದಿದ್ದಾಳೆಯೇ ಅಥವಾ ಇಲ್ಲವೇ ಎನ್ನುವುದನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೂ ಒಂದೇ ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಬಸ್ಸುಗಳ ಹತ್ತಿರ ಪೋಲೀಸಿನವರು ಸರಿಯಾಗಿ ನೋಡಿಕೊಳ್ಳದೆ ಓವರ್‌ಲೋಡ್ ಮಾಡುವುದಕ್ಕೆ ಅವಕಾಶವಾಗಿದೆ. ಇತ್ತೀಚೆಗೆ ಶಿಡ್ಲಘಟ್ಟದ ಹತ್ತಿರ "ಜಮುನ ಎಕ್ಸ್‌ಪ್ರೆಸ್" ಎಂಬ ಬಸ್ಸು ಆಕ್ಸಿಡೆಂಟ್ ಆಗಿ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟರು. ಓವರ್ ಲೋಡ್ ಅಂದರೆ ಎಷ್ಟು ಎಂಬುದನ್ನು ಹೇಳುತ್ತೇನೆ. ಆ ಬಸ್ಸಿನಲ್ಲಿ 62 ಜನ ಪ್ಯಾಸೆಂಜರುಗಳು, ಮೇಲ್ಗಡೆ 30 ಮೂಟೆ ಸಿಮೆಂಟ್ ಮತ್ತು ಒಂದು ಮೂಟೆ ಸಕ್ಕರೆ, ಇಷ್ಟೂ ಹಾಕಿದ್ದರು. ಆ ದಿನದ ಆಕ್ಸಿಡೆಂಟ್‌ನಲ್ಲಿ ನಾನೂ ಒಬ್ಬ ಇದ್ದೆ. ಆ ಬಸ್ಸಿನಲ್ಲಿ ಶಿಡ್ಲಘಟ್ಟ ಅಮಲ್ದಾರರ ಗರ್ಭಿಣಿ ಹೆಂಡತಿ ಸಹ ಇದ್ದರು. ಅವರಿಗೆ ಪ್ರಾಣ ಹೋಗುವ ಸ್ಥಿತಿಯಲ್ಲಿತ್ತು. ಆಕೆಯನ್ನು ತಕ್ಷಣವೇ ಚಿಕ್ಕಬಳ್ಳಾಪುರದ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿದರು. ದೈವವಶಾತ್ ಆಕೆ ಉಳಿದುಕೊಂಡರು. ಇಂಥ ವಿಚಾರದಲ್ಲಿ ಪೋಲೀಸಿನವರು ಕಟ್ಟುನಿಟ್ಟಾಗಿರುವಂತೆ ವ್ಯವಸ್ಥೆ ಮಾಡಬೇಕು. ಒಂದು ವ್ಯವಸ್ಥಿತ ರೀತಿಯಲ್ಲಿ ಪೋಲೀಸಿನವರು ವರ್ತಿಸಿದರೆ ಜನರಿಗೆ ಕ್ಷೇಮ. ಆದುದರಿಂದ ಸರ್ಕಾರದವರು ಈ ವಿಚಾರಗಳಲ್ಲಿ ಸರಿಯಾದ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

*Sri H. SIDDAVEERAPPA (Home Minister).—Sir, I request you to kindly permit me to sit and reply. I have heard with very rapt attention to the various criticisms levelled by Hon'ble Members. They have painted the Police, some of them, in the darkest colour and have said that the administration is as bad as it could be. But, however, there are friends like Sri Prabhakar who have taken a dispassionate view of things and have said that the Police after all have to act in liaison with the public, and the measure of the success of police administration is proportionately dependent on the responsive co-operation given by the public. Even if God is made a police officer, I am sure, as soon as he wears Khaki, He is bound to get the same criticism. The job is such. I feel, Sir, the work of the Police is bound to come into public criticism because the nature of work they do is such. I am not one of those to say that the policeman is a perfect being. I am not one of those who advocate that the police administration is hundred per cent flawless. If the efficiency of the department is to be measured by the number of cases detected and the number of convictions secured in any area, I have got the authenticated document prepared by Government of India. It is 'Crime in India' published by the Intelligence Bureau, Ministry of Home Affairs, Government of India.

Sri B. NARAYANASWAMY (Mysore South).—May I know whether it is based on the report furnished by Mysore Government ?

Sri H. SIDDAVEERAPPA.—They collect statistics and it is the Director of Intelligence Bureau, Government of India, that has published this pamphlet.

Sri B. NARAYANASWAMY.—I want to know whether the facts collected by the Bureau of Intelligence is on the basis of the figures furnished by Mysore Government.

Sri H. SIDDAVEERAPPA.—Naturally the States Governments. But, I do not think my friend disputes facts as such.

Sri B. NARAYANASWAMY.—I am not disputing facts. But, unfortunately, I have no occasion to speak.

Sri H. SIDDAVEERAPPA.—Sir, it is clear and obvious that these facts were furnished by the Government of Mysore. It could be seen from one of the important abstracts here that the average of cases convicted to true cases in India comes to 31.3 for one lakh of population ; but the percentage of cases convicted to cases on trial—the Indian average is 59.2. In Mysore the percentage of cases convicted to true cases investigated is 51.2, whereas the percentage of cases convicted to cases tried is 70.8. I have got the figures to show for various States, but I think it is unnecessary for me to detail all those figures. It is sufficient to say that when compared with the all-India average, the figures of Mysore stand a good and better comparison.

Sri B. NARAYANASWAMY.—All very good consolation.

Sri H. SIDDAVEERAPPA.—It is a matter for judgment. There are gentlemen in this country—I must thank them—who appreciate the good work of the police. My esteemed friend Sri Venkatappa has addressed a letter to me in the month of September 1955 congratulating the good work done by the Assistant Superintendent of Police and the Police Inspector of that area, more particularly in prohibition. I am indeed thankful to such gentlemen who, when they find that there are good officers doing good work, appreciate the work, pat them and extract more and more good from them. Therefore, I have got quite a large number of records to show that in some cases our people have done splendid work.

I may give an illustration of a case which happened in Mysore State last year. An international criminal who has dozens of dacoities and robberies to his credit, was caught red-handed here and when he was caught red-handed, he had actual cash in currency notes to the tune of three lakhs and odd. The entire money was offered by him to the Police. The Police refused to touch it and they produced him and they produced the entire money. This was appreciated by Government of India.

Sri J. MOHAMED IMAM (Jagalur).—But he escaped.

Sri H. SIDDAVEERAPPA.—He escaped elsewhere, not here. Therefore, Sir, I may assure the Hon'ble Members that in the administration there are people who are really doing good work. It was said that the material in the department was bad. Yes; to a certain extent it may be true. That is a story not only here but elsewhere in India. We have been thinking how to eliminate the handicaps in the present Police Department. The most important is one of proper recruitment. Government of India, in consultation with the State Government, has been formulat-ing a policy regarding proper recruitment which, I am sure, ere long, will be put into practice.

Sir, it has been said by my friends that the Police budget has swelled and during the last ten years it has swelled enormously. When compared with international standards, generally in India the police are undermanned. That is more so in our State. I think it is not necessary for me to quote figures now because every year I am doing it. In our State for every lakh of population, when compared with other parts, the number is not really as much as it ought to be. The Hon'ble Member Sri Srinivasa Iyengar wanted to know as to what has happened to the revision of the Police Act. I agree with him that the Act we are now having is out of tune. It requires a revision. The Act was meant for a different purpose, but after 1947 that requires substantial modification and revision. We have appointed an officer for that purpose and a District Superintendent of Police has been at it. But, just at the time when I was about to introduce the Police Act, it has now happened that the State of Mysore will be much more enlarged; various other areas come to Mysore and Mysore becomes greater Mysore. Therefore, Government thought that instead of introducing the Bill now, it would be much more advantageous to have an Act after October 1956 when the State would have been reorganised. It is for this reason, Sir, the Police Act would not be introduced earlier.

The Hon'ble Member Sri P. R. Ramaiya brought to my notice some of the small thefts happening in Bangalore. I will pay my personal attention to it and see what can be done in the matter. Sri Sivananje Gowda said about some local complaint about the transfer of the police station; I will get the matter examined. The report is that it is within the jurisdiction; anyhow, even now if it is possible to give him any relief, I shall see what could be done. I agree with Sri Boranna Gowda that prohibition staff should be augmented. It is not necessary to repeat the figures about prohibition cases because it has already been given in the Note given by me to the Hon'ble Members about the working of the Department. There are large number of handicaps and difficulties not to make the prohibition as successful as it ought to be. One of the most important reasons is the lenient punishments given by the courts

over which we have no control. Hitherto these cases used to be adjourned for a long time. But, now after the amendment of the Criminal Procedure Code, I am sure things would improve and we would be able to give a better account of ourselves. The idea of having a special prohibition staff has attracted my attention and I shall see what could be done in the matter.

Regarding working of the Acts for the eradication of untouchability and various other things, I have got the figures and I may say without fear of contradiction, that things today are much more better than what they were earlier. There is public awakening that we can no longer treat our brethren in the manner we were treating them once. As time advances these things would further improve.

Sri Hutche Gowda referred to the scale of pay of the police officials. The Indian Police Service are on an All-India scale. There

4 P.M.

is much force in what he says as to what we are going to do after the new State comes into force. This is the time for us to think. So far as various other matters that arise after integration are concerned, Government will certainly examine and see that these disparities are reduced or eliminated within the minimum period. (*Sri B. Hutche Gowda.—Regarding Police Constables?*) The Chief Minister in his budget speech has referred to it. I do not think you expect a special reference from me. That is a matter of real grievance. We have to examine it and face it one day or the other.

Sri L. SIDDAPPA.—I think I have said that special Police arrangements will have to be made in the construction of Bhadra Reservoir Project.

Sri H. SIDDAVEERAPPA.—That will be examined. Hon'ble Members have referred to various other points. I have noted them. They will receive my attention. I shall see what can be done so far as those things are concerned. When all is said, we should not forget that the policeman has to discharge his duties under very trying circumstances. Especially during the year 1955 they had to face critical situations, and various developments. I have no hesitation in saying that with commendable tact and courage they have discharged their duties to the satisfaction of the Government. I therefore pray that this Demand may be voted.

Mr. SPEAKER.—The question is:

"That a sum not exceeding Rs. 1,27,17,860 be granted to the Government to defray the charges which will come in course of payment during the year ending 31st day of March 1957, in respect of 'Police'."

The motion was adopted.

Unparliamentary Words.

Mr. SPEAKER.—Before we take up other Demands, I want to give my ruling on the points raised by some Hon'ble Members.

On the 16th instant, during the Hon'ble Finance Minister's reply to the Budget debate, the Minister commenced a sentence by saying "These Hon'ble four members have made a combination . . ." referring among others to Hon'ble Member Sri K. Puttaswamy. Hon'ble Member Sri Nagaiah Reddy interrupting said "That is stupid talk". Objection was taken to the use of these expressions by the Hon'ble Finance Minister as well as the Hon'ble Member Sri Nagaiah Reddy. I stated that on first impression the word 'Stupid' was unparliamentary and should be expunged. After certain members had intervened I stated that I would examine the use of these expressions by the two Hon'ble members and would give a ruling later.

In the cut and thrust of debate, in the heat of argument or in ventilating grievances and in meeting those charges it is inevitable that certain words are apt to find ready expression. But Hon'ble Members will appreciate that it cannot be said that only unparliamentary words should not be used in the Assembly and that words which fall short of being unparliamentary